# ಮೈಸೂರು ದಸರಾ ಪರಂಪರೆ, ಇತಿಹಾಸ ಮತ್ತು ವೈಭವ ದಸರೆಯ ಮಹತ್ವ

ಸೂರ್ಯಪ್ರಗತಿನ್ಯೂಸ್.ಕಾಂ

ನಿನ್ನೆಯಿಂದ ಮುಂದುವರಿಯುತ್ತಿದೆ.

ಜಂಬೂ ಸವಾರಿಯಲ್ಲಿಅಲಂಕೃತ ಆನೆಗಳು

ದಸರೆಯ ವಿಶೇಷ ಕಾರ್ಯಕ್ರಮಗಳು:

ಯುವ ಸಂಭ್ರಮ, ಯುವ ದಸರಾ:

ದಸರಾಗೆ ಯುವ ಜನರನ್ನು ಸೆಳೆಯಲು ಯುವ ಸಂಭ್ರಮ ಮತ್ತು ಯುವ ದಸರಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಲಾಗುತ್ತದೆ. ಮೈಸೂರು ವಿಶ್ವ ವಿದ್ಯಾಲಯದಲ್ಲಿರುವ ಬಯಲು ರಂಗಮಂದಿರದಲ್ಲಿ ಯುವ ಸಂಭ್ರಮ ಸಮಾರಂಭ ನಡೆಯುತ್ತದೆ. ಇದರಲ್ಲಿ ಸ್ಥಳೀಯ ಕಲಾವಿದರಿಗೆ ಆದ್ಯತೆ ನೀಡಲಾಗುತ್ತದೆ. ಜನಪದ ಸೇರಿದಂತೆ ವಿವಿಧ ಪ್ರಾಕಾರಗಳ ನೃತ್ಯ ಕಲಾವಿದರ ಪ್ರದರ್ಶನ ಗಮನ ಸೆಳೆಯುತ್ತದೆ. ವಿವಿಧ ಜಿಲ್ಲೆಗಳ ಶಾಲಾ-ಕಾಲೇಜು ವಿದ್ಯಾರ್ಥಿಗಳು ಈ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಇನ್ನು ಯುವ ದಸರಾದಲ್ಲಿ ಸಿನಿಮಾ ತಾರೆಯರು ಹಾಗೂ ಖ್ಯಾತಗಾಯಕರ ಸಮಾಗಮವಾಗುತ್ತದೆ. ಮಹಾರಾಜ ಮೈದಾನದಲ್ಲಿ ಸಮಾರಂಭ ನಡೆಯುತ್ತದೆ. ತಮ್ಮ ನೆಚ್ಚಿನ ನಟ-ನಟಿಯರು, ಗಾಯಕರನ್ನು ನೋಡಲು ಅಪಾರ ಸಂಖ್ಯೆಯಲ್ಲಿ ಯುವ ದಸರಾದಲ್ಲಿ ಜನ ಸೇರುತ್ತಾರೆ.

ಕಂಬಳ: ಮೈಸೂರು ದಸರಾದಲ್ಲಿ ಇದೇ ಮೊದಲ ಬಾರಿಗೆ ಕರಾವಳಿಯ ಕೃಷಿ ಸಂಸ್ಕೃತಿ ಹಾಗೂ ಜನಪದದ ಪ್ರತೀಕವಾದ 'ಕಂಬಳ' ಆಯೋಜನೆ ಮಾಡಲಾಗುತ್ತಿದೆ. ಅಕ್ಟೋಬರ್ 18 ಮತ್ತು 19ರಂದು ಮೈಸೂರಿನ ಸಾತಗಳ್ಳಿಯಲ್ಲಿ ಆಯೋಜಿಸಲು ಅಧಿಕೃತವಾಗಿ ಸಿದ್ಧತೆಗಳು ನಡೆದಿವೆ. ದಷ್ಟ- ಪುಷ್ಟವಾಗಿ ಬೆಳೆಸಿದ ಕೋಣಗಳನ್ನು ಹಸನಾಗಿ ಹದ ಮಾಡಿದ ಮಣ್ಣಿನ ಗದ್ದೆಯಲ್ಲಿ ಓಡಿಸುವ ಸ್ಪರ್ಧೆಯೇ ಕಂಬಳ. ಈ ಕ್ರೀಡೆ ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಯ ಜನಪದದೊಂದಿಗೆ ಹಾಸು ಹೊಕ್ಕಾಗಿದೆ. ಸಾಂಸ್ಕೃತಿಕ ಹಿನ್ನೆಲೆಯ ಕ್ರೀಡೆಯನ್ನು ದಸರಾದಲ್ಲಿ ಆಯೋಜಿಸಲಾಗುತ್ತಿದೆ.

ಮೇಳಗಳು: ಕೃಷಿ, ಆಹಾರ ಮೇಳಗಳನ್ನು ದಸರಾದಲ್ಲಿ ನಡೆಸಲಾಗುತ್ತದೆ. ರಾಜ್ಯದ ನಾನಾ ಭಾಗಗಳ ಸ್ಥಳೀಯ ಹಾಗೂ ವಿಶೇಷ ತಿನಿಸುಗಳು ಮಳಿಗೆಗಳಲ್ಲಿ ಸಿಗುತ್ತವೆ. ಆಹಾರ ಪ್ರಿಯರಿಗೆ ಈ ಮೇಳ ಖುಷಿ ಕೊಡುತ್ತದೆ. ಇಲ್ಲಿ ಸ್ಪರ್ಧೆಗಳನ್ನು ಸಹ ಆಯೋಜನೆ ಮಾಡಲಾಗುತ್ತದೆ. ತಿನ್ನುವ ಮತ್ತು ಅಡುಗೆ ಸ್ಪರ್ಧೆಗಳು ನಡೆಯುತ್ತವೆ. ವಿಜೇತರಿಗೆ ವಿಶೇಷ ಬಹುಮಾನಗಳು ಸಹ ಇರುತ್ತವೆ. ಕೃಷಿ ಮೇಳವು ರೈತರಿಗೆ ಸಹಕಾರಿಯಾಗಲಿದೆ. ನಾನಾ ತಳಿಯ ಬೆಳೆಗಳು ಮತ್ತು ಹಣ್ಣುಗಳ ಪ್ರದರ್ಶನ ಮಾರಾಟಕ್ಕೆ ಅವಕಾಶ ಇರುತ್ತದೆ. ರೈತರಿಗೆ ಕೃಷಿ ಸಂಬಂಧಿತ ಸಲಹೆಗಳಿಗಾಗಿ ವಿಚಾರ ಸಂಕಿರಣಗಳನ್ನು ಸಹ ಆಯೋಜನೆ ಮಾಡಲಾಗುತ್ತದೆ.

ಫಲಪುಷ್ಪ, ವಸ್ತು ಪ್ರದರ್ಶನ:

ದಸರಾದಲ್ಲಿ ಫಲಪುಷ್ಪ ಮತ್ತು ವಸ್ತು ಪ್ರದರ್ಶನಗಳು ಪ್ರಮುಖ ಆಕರ್ಷಣೆಯಾಗಿದೆ. ವಿವಿಧ ಬಗೆಯ ಪುಷ್ಪಗಳಿಂದ ನಾನಾ ಮಾದರಿಗಳನ್ನು ರಚಿಸಿ ಪ್ರದರ್ಶಿಸಲಾಗುತ್ತದೆ. ಆಕರ್ಷಕ ಪುಷ್ಪ ಮಾದರಿಗಳು ಜನರನ್ನು ಸೆಳೆಯುವಂತಿರುತ್ತವೆ. ಅನೇಕರಿಗೆ ಇದು ಸೆಲ್ಫಿಸ್ಪಾಟ್ ಆಗುತ್ತದೆ. ಸರ್ಕಾರಗಳ ಪ್ರಮುಖ ಯೋಜನೆಗಳನ್ನು, ಕಾರ್ಯ ಸಾಧನೆಗಳನ್ನು ವಸ್ತುಪ್ರದರ್ಶನದ ಮೂಲಕ ತಿಳಿಸಲಾಗುತ್ತದೆ. ನಾಡು-ದೇಶದ ಇತಿಹಾಸ, ಪ್ರವಾಸಿ







ತಾಣಗಳ ಬಗ್ಗೆ ಅರಿವು ಮೂಡಿಸುವ ಮಾದರಿಗಳು ಇರುತ್ತವೆ.

ಗೊಂಬೆ ಪ್ರದರ್ಶನ

ಸ್ಥಳೀಯವಾಗಿ 'ಗೊಂಬೆ ಹಬ್ಬ' ಅಥವಾ 'ಬೊಂಬೆ ಮನೆ' ಎಂದು ಕರೆಯಲ್ಪಡುವ ಮೈಸೂರು ದಸರಾ ಗೊಂಬೆ ಪ್ರದರ್ಶನವು ಶತಮಾನಗಳಷ್ಟು ಹಳೆಯ ಸಂಪ್ರದಾಯವಾಗಿದೆ. ಇದರಲ್ಲಿ ನವರಾತ್ರಿ ಹಬ್ಬದ ಸಂದರ್ಭದಲ್ಲಿ ಮನೆಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಸುಂದರವಾಗಿ ಹಾಗೂ ವ್ಯವಸ್ಥಿತವಾಗಿ ಜೋಡಿಸಲಾದ ಗೊಂಬೆಗಳು ಮತ್ತು ಮೂರ್ತಿಗಳನ್ನು ಪ್ರದರ್ಶಿಸಲಾಗುತ್ತದೆ. ಈ ಪ್ರದರ್ಶನವು ರಾಮಾಯಣದಂತಹ ಪೌರಾಣಿಕ ಮಹಾಕಾವ್ಯಗಳು, ದಸರಾ ಮೆರವಣಿಗೆಯ ದೃಶ್ಯಗಳು(ಜಂಬೂ ಸವಾರಿ), ನವದುರ್ಗೆಯರು ಮತ್ತು ಅಷ್ಟ ಲಕ್ಷ್ಮಿಯರ ಜೊತೆಗೆ ಸಮಕಾಲೀನ ಅಥವಾ ಸಾಮಾಜಿಕ, ಸಾಂಸ್ಕೃತಿಕ ವಿಷಯಗಳನ್ನು ಹೆಚ್ಚಾಗಿ ಬಿಂಬಿಸುತ್ತವೆ.

ಮಕ್ಕಳ ದಸರಾ ;ದಸರಾದಲ್ಲಿ ವಿಶೇಷ ಆಕರ್ಷಣೆ ಮಕ್ಕಳ ದಸರಾ ಆಗಿದೆ. ಮಕ್ಕಳ ದಸರಾದಲ್ಲಿ ವಿಶೇಷವಾಗಿ ವಿವಿಧ ಮಕ್ಕಳ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತದೆ. ವಿಶೇಷ ಸಾಧನೆ ತೋರಿದ ಮಕ್ಕಳಿಂದ ಮಕ್ಕಳ ದಸರಾವನ್ನು ಉದ್ಘಾಟಿಸಲಾಗುತ್ತದೆ.

ಮೈಸೂರು ದಸರಾ ಕೇವಲ ಧಾರ್ಮಿಕ ಉತ್ಸವವಲ್ಲ. ಇದು ಕರ್ನಾಟಕದ ಸಾಂಸ್ಕೃತಿಕ ಪರಂಪರೆ, ಕಲೆ, ಸಂಗೀತ, ನೃತ್ಯ, ಜನಪದ ಸಂಪ್ರದಾಯಗಳು ಮತ್ತು ಐತಿಹಾಸಿಕ ನೆನಪುಗಳನ್ನು ಒಂದೆಡೆ ಸೇರಿಸುವ ಉತ್ಸವವಾಗಿದೆ.

ಗೋಷ್ಠಿಗಳು: ಖ್ಯಾತ ವಿದ್ವಾಂಸರು, ಸಾಹಿತಿಗಳು, ಕವಿಗಳ ನೆಲೆವೀಡು ಮೈಸೂರು. ಸಂಗೀತ-ಸಾಹಿತ್ಯ ಕ್ಷೇತ್ರಗಳಿಗೆ ಮೈಸೂರು ತನ್ನದೇ ಆದ ಕೊಡುಗೆ ನೀಡಿದೆ. ಆದ್ದರಿಂದ ದಸರಾದಲ್ಲಿ ಕವಿಗೋಷ್ಠಿ, ವಿಚಾರ ಸಂಕಿರಣಗಳು, ಸಂಗೀತ ಕಛೇರಿಗಳನ್ನು ಆಯೋಜಿಸಲಾಗುತ್ತದೆ. ದಸರಾ ಮತ್ತು ಯುವ ಕವಿಗೋಷ್ಠಿ ಮೂಲಕ ಸಾಹಿತ್ಯಾಸಕ್ತರನ್ನು ಸೆಳೆಯಲಾಗುತ್ತದೆ. ಓದುಗ ಪ್ರಿಯರಿಗಾಗಿ ಪುಸ್ತಕ ಮೇಳ ಕೂಡ ನಡೆಸಲಾಗುತ್ತದೆ. ಸಂಗೀತ ಪ್ರಿಯರಿಗಾಗಿ ಅರಮನೆಯಲ್ಲಿ ಸಂಗೀತ ಕಾರ್ಯಕ್ರಮಗಳು ಜರುಗುತ್ತವೆ. ಖ್ಯಾತ ವಿದ್ವಾಂಸರು, ಕಲಾವಿದರು ಸಂಗೀತ ಕಾರ್ಯಕ್ರಮಗಳನ್ನು ನಡೆಸಿಕೊಡುತ್ತಾರೆ. ಕಲಾಸಕ್ತರಿಗಾಗಿ ಚಲನ ಚಿತ್ರೋತ್ಸವ, ನಾಟಕ ಪ್ರದರ್ಶನಗಳು ಸಹ ನಡೆಯುತ್ತವೆ.

ಪಂಜಿನ ಕವಾಯತು; ವಿಜಯದಶಮಿಯಂದು ಜಂಬೂ ಸವಾರಿ ಮೆರವಣಿಗೆ ಬಳಿಕ ಸಂಜೆ ಮೈಸೂರಿನ ಬನ್ನಿಮಂಟಪ ಮೈದಾನದಲ್ಲಿ ನಡೆಯುವ ಅತ್ಯಂತ ಆಕರ್ಷಕ ಮತ್ತು ರೋಮಾಂಚಕ ಅಂತಿಮ ಕಾರ್ಯಕ್ರಮ ಪಂಜಿನ ಕವಾಯತು. ಇದು ಪೊಲೀಸ್ ಪಡೆಗಳ ಕವಾಯತು, ಸಾಹಸ ಪ್ರದರ್ಶನ ಹಾಗೂ ಬಣ್ಣ-ಬಣ್ಣದ ಪಟಪಟಿಸುವ ಪಂಜುಗಳ ಬೆಳಕಿನ ಸಂಭ್ರಮದೊಂದಿಗೆ ಕಣ್ಮನ ಸೆಳೆಯುತ್ತದೆ. ಅತ್ಯಾಕರ್ಷಕ ಅಶ್ವಾರೋಹಿ ದಳದ ಸಾಹಸಗಳು, ಮೈಜುಮ್ಮೆನಿಸುವ ಮೋಟಾರ್ ಸೈಕಲ್ ಸಾಹಸ ಪ್ರದರ್ಶನಗಳು (ಡೇರ್‌ಡೆವಿಲ್ ಸ್ಟಂಟ್ಸ್), ಪೊಲೀಸ್ ಬ್ಯಾಂಡ್ ವಾದನ ಮತ್ತು ಪಂಜುಗಳೊಂದಿಗೆ ಸಾಮೂಹಿಕ ಕವಾಯತು ನಡೆಯುತ್ತದೆ. ರಾತ್ರಿಯ ವೇಳೆ ಆಕಾಶದಲ್ಲಿ ಮೂಡುವ ವರ್ಣರಂಜಿತ ಸುಂದರ ಸಿಡಿಮದ್ದು ಪ್ರದರ್ಶನ ಹಾಗೂ ಲೇಸರ್/ಡ್ರೋಣ್ ಶೋ ಕೂಡಾ ಗಮನ ಸೆಳೆಯುತ್ತದೆ. ದಸರಾಗೆ ಅಂತಿಮ ಸ್ಪರ್ಶ ನೀಡುವ ಕಾರ್ಯಕ್ರಮ ಇದಾಗಿದೆ. ರಾಜರ ಕಾಲದಿಂದಲೂ ನಡೆದುಕೊಂಡು ಬಂದಿರುವ ಈ ಪರಂಪರೆಯು ದಸರಾ ಉತ್ಸವದ ಸಮಾಪ್ತಿಯನ್ನು ಸಾರುತ್ತದೆ.




ಅರಮನೆಯೊಳಗಿನ ಸಾಂಪ್ರದಾಯಿಕ ಆಚರಣೆಗಳು ಮೈಸೂರು ಒಡೆಯರ ಇತಿಹಾಸವನ್ನು ನೆನಪಿಸಿದರೆ, ಸಾರ್ವಜನಿಕ ದಸರಾ ಕಾರ್ಯಕ್ರಮಗಳು ಆ ಪರಂಪರೆಯನ್ನು ಜನಸಾಮಾನ್ಯರೊಂದಿಗೆ ಸಂಪರ್ಕಿಸುತ್ತವೆ.

ಸಮಾರೋಪ; ಮೈಸೂರು ದಸರಾ ಹಲವು ಶತಮಾನಗಳ ಇತಿಹಾಸ, ಧಾರ್ಮಿಕ ನಂಬಿಕೆ, ರಾಜಪರಂಪರೆ, ಕಲೆ, ಸಂಸ್ಕೃತಿ ಮತ್ತು ಜನಪಾಲ್ಗೊಳ್ಳುವಿಕೆಯ ಅಪೂರ್ವ ಸಂಗಮವಾಗಿದೆ. ವಿಜಯನಗರದ ಪರಂಪರೆಯಿಂದ ಮೈಸೂರು ಒಡೆಯರ ರಾಜವೈಭವದವರೆಗೆ ಮತ್ತು ಅಲ್ಲಿಂದ ಇಂದಿನ ನಾಡಹಬ್ಬದ ರೂಪದವರೆಗೆ ದಸರಾ ಹಲವು ಹಂತಗಳನ್ನು ದಾಟಿ ಬೆಳೆದಿದೆ.

ಬನ್ನಿ, ಈ ವರ್ಷದ ನಾಡಹಬ್ಬ ದಸರಾದಲ್ಲಿ ಎಲ್ಲರೂ ಪಾಲ್ಗೊಂಡು, ವೈವಿಧ್ಯಮ ಆಚರಣೆಗಳನ್ನು ಕಣ್ತುಂಬಿಕೊಳ್ಳೋಣ!

(ಡಾ. ಶಾಲಿನಿ ರಜನೀಶ್)
ಸರ್ಕಾರದ ಮುಖ್ಯ ಕಾರ್ಯದರ್ಶಿ



# ಸುಮ್ಮನೆ ಜೀವಂತವಾಗಿ ಉಳಿಯುವುದಕ್ಕೂ ಘನತೆ ಗೌರವದಿಂದ ಬಾಳಿ ಬದುಕುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ"

# ದಾದಾಸಾಹೇಬ್ ಕಾನ್ಷೀರಾಮ್ ಜಿ ರವರ ಪರಿನಿರ್ವಾಣ ದಿನಾಚರಣೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೇಡುವ ಸಮಾಜವನ್ನು ನೀಡುವ ಸಮಾಜ ಮಾಡುವುದೇ ನನ್ನ ಮುಖ್ಯ ಹಾಗೂ ಪರಮ ಗುರಿ ದಾದಾ ಸಾಹೇಬ್ ಕಾನ್ಷೀರಾಂಜೀ,"ಬದುಕಿ ಉಳಿಯುವುದೇ ದೊಡ್ಡ ಸಾಧನೆಯಲ್ಲ ಬದುಕಿ ಉಳಿಯುವ ಅನೇಕ ರೀತಿಗಳಿವೆ ಆದರೆ ಎಲ್ಲಾ ತರದ ಬದುಕು ನಮ್ಮ ಗೌರವ ಹಾಗೂ ಹೆಮ್ಮೆಗೆ ಅರ್ಹವಲ್ಲ ಒಬ್ಬ ವ್ಯಕ್ತಿಯಾಗಲಿ ಅಥವಾ ಒಂದು ಸಮಾಜವಾಗಲಿ ಸುಮ್ಮನೆ ಜೀವಂತವಾಗಿ ಉಳಿಯುವುದಕ್ಕೂ ಘನತೆ ಗೌರವದಿಂದ ಬಾಳಿ ಬದುಕುವುದಕ್ಕೂ ಸಾಕಷ್ಟು ವ್ಯತ್ಯಾಸವಿದೆ"ಇದು ಮಾನ್ಯವರ್ ಕಾನ್ಷೀರಾಂಜೀ , ಡಾಕ್ಟರ್ ಬಿ ಆರ್ ಅಂಬೇಡ್ಕರ್, ಜ್ಯೋತಿ ಬಾಪುಲೆ ,ಸಾವಿತ್ರಿಬಾಯಿ ಫುಲೆ, ಶಾಹುಮಹಾರಾಜ್, ನಾರಾಯಣ ಗುರು, ನಾಲ್ವಡಿ ಕೃಷ್ಣರಾಜ ಒಡೆಯರ್ ಟಿಪ್ಪು ಸುಲ್ತಾನ್ ಕುವೆಂಪು ಬಸವಣ್ಣ ಇವರೆಲ್ಲರೂ ಬಹಳ ಘನತೆ ಗೌರವದಿಂದ ಬದುಕಿ ಸಮಾಜದ ಅಭಿವೃದ್ಧಿಗೆ ಕೆಲಸ ಮಾಡಿದ ನಾಯಕರು ಇವರೆಲ್ಲರ ದಾರಿಯಲ್ಲಿ ಕಾನ್ಷೀರಾಂಜೀ ಅಕ್ಟೋಬರ್ 9 2006 ಪರಿನಿರ್ವಾಣ ದಿನಾಚರಣೆ ಅಂಗವಾಗಿ ಅಂದರೆ ದಾದಾಸಾಹೇಬ್ ಕಾನ್ಷೀರಾಮ್ ಜಿ ರವರು ಯಾರು ಅವರು ಆರಂಭದಲ್ಲಿ ಏನು ಕೆಲಸ ಮಾಡುತ್ತಿದ್ದರು ಅವರು ಎಲ್ಲಿನವರು ಯಾವ ಊರು, ಯಾವ ಜಿಲ್ಲೆ, ಯಾವ ರಾಜ್ಯ ಎಂದು ಬಹಳಷ್ಟು ಜನರಿಗೆ ಭಾರತ ದೇಶದಲ್ಲಿ ತಿಳಿದಿಲ್ಲ ಆದರೆ ನಮ್ಮೆಲ್ಲರ ವಿಮೋಚಕರಾದ ಅಂಬೇಡ್ಕರ್ ಅವರ ವಾದವನ್ನು ಉಸಿರಾಗಿಸಿಕೊಂಡು ಅಂಬೇಡ್ಕರ್ ಕಟ್ಟಿದ ಸ್ವತಂತ್ರ ಕಾರ್ಮಿಕ ಪಕ್ಷ ಮತ್ತು ಎಸ್ಸಿ ಎಸ್ಟಿ ಶೆಡ್ಯೂಲ್ ಕ್ಯಾಸ್ಟ್ ಫೆಡರೇಷನ್ ಗೆ ನೀಲಿ ಬಾವುಟ ಮತ್ತು ಆನೆ ಗುರುತು ತೆಗೆದುಕೊಂಡು ರಾಜಕೀಯ ಆರಂಭಿಸಿದ ಅಂಬೇಡ್ಕರ್ ಅವರು 1956 ಮರಣದ ನಂತರ ಅಂಬೇಡ್ಕರ್ ಅವರ ವಿಚಾರಧಾರೆಯನ್ನ ಇಟ್ಟುಕೊಂಡು ಯಾವುದೇ ರಾಜ್ಯಕೀಯ ಕುಟುಂಬ ಹಿನ್ನೆಲೆ ಇಲ್ಲದೆ ಕೇವಲ ಒಂದು ಬಾಡಿಗೆ ಸೈಕಲ್ ಹಿಟ್ಟುಕೊಂಡು ಹಳ್ಳಿ ಗ್ರಾಮ ನಗರ ಪಟ್ಟಣ ರಾಜ್ಯ ವರರಾಜ್ಯಗಳು ಸುತ್ತಿ ಬಾಂಸೆಪ್,ಡಿ ಎಸ್ 4, ಬಿಎಸ್ಪಿ ಸಂಸ್ಥಾಪಕರು ಆದ ಉತ್ತರ ಭಾರತದ ಪಂಜಾಬ್ ರಾಜ್ಯದ ರೋಪರ್ ಜಿಲ್ಲೆಯ ಖಾವಸ್ ಪುರ ಎಂಬ ಹಳ್ಳಿಯಲ್ಲಿ ವಾಸವಿದ್ದ ಹರಿಸಿಂಗ್ ಮತ್ತು ಬಿಷನ್ ಕೌರ್ ಎಂಬ ದಂಪತಿಗಳ ಮಗನಾಗಿ ಮಾರ್ಚ್ 15 1934 ರಂದು ಚಮಾರ್ (ಮಾದಿಗ ಸಮುದಾಯಕ್ಕೆ) ಸೇರಿದ ತಾಯಿಯ ತವರಮನೆಯಾದ ಬುಂಗ ಸಾಹೇಬ್ ಎಂಬ ಹಳ್ಳಿಯಲ್ಲಿ ಕಾನ್ಷೀ ರಾಮ್ ಜೀ ಜನಿಸಿದರು ಅವರು ಬಾಲ್ಯದಿಂದಲೇ ಧೈರ್ಯವಂತ, ಕ್ರೀಡಾಪಟು, ಕುಸ್ತಿಪಟು, ಓದು ಮತ್ತು ಈಜುವುದರಲ್ಲಿ ಎತ್ತಿದ ಕೈ ದಾದಾಸಾಹೇಬ್



ಕಾನ್ಷೀರಾಂ ಜಿ ರವರು ಬಾಲ್ಯದಿಂದಲೇ ಸರಕಾರಿ ಶಾಲೆಯಲ್ಲಿ ಮಲ್ಲಿಕಾಪುರದ ಪ್ರಾಥಮಿಕ ಶಿಕ್ಷಣ ಹಾಗೂ ಡಿಬಿಎ ಪಬ್ಲಿಕ್ ಶಾಲೆಯಲ್ಲಿ ಪ್ರೌಢ ಶಿಕ್ಷಣ ಮುಗಿಸಿದರು 1956 ರಲ್ಲಿ ಬಿ ಎಸ್ ಸಿ ಪದವಿಯನ್ನು ರೋಪರ್ ಸರ್ಕಾರಿ ಕಾಲೇಜಿನಲ್ಲಿ ಪಡೆದರು ನಂತರ ಡೆಹರಾಡೂನ್ ಭಾರತೀಯ ವೈಜ್ಞಾನಿಕ ಸರ್ವೇಕ್ಷಣ ಇಲಾಖೆಯಲ್ಲಿ ವಿಜ್ಞಾನಿಯಾಗಿ ಕೆಲಸಕ್ಕೆ ಸೇರಿದರು ಆ ಕಛೇರಿಯಲ್ಲಿ ಡಾಕ್ಟರ್ ಬಿ ಆರ್ ಅಂಬೇಡ್ಕರ್ ರವರು ಮರಣ ಹೊಂದಿದ ವಿಷಯ ತಿಳಿದು ಕಾನ್ಷೀರಾಮ್ ಜಿ ಸಹೋದ್ಯೋಗಿ ಯಾಗಿದ್ದ ಮೊಹಮ್ಮದ್ ಗೈನಿ ರವರು ಅನ್ನ ನೀರು ಮೂರು ದಿನ ಬಿಟ್ಟು ಬಹಳ ದುಃಖ ಪಡುತ್ತಿದ್ದರು. ಆ ದಿನದಿಂದ ಡಾಕ್ಟರ್ ಬಿ ಆರ್ ಅಂಬೇಡ್ಕರ್ ಅವರ ಬಗ್ಗೆ ತಿಳಿದುಕೊಳ್ಳಲು ಆಸಕ್ತಿಯನ್ನು ಬೆಳೆಸಿಕೊಂಡರು ಕಾನ್ಷೀರಾಂಜೀ ಕೆಲಸ ಮಾಡುವ ಸರ್ಕಾರಿ ಕಚೇರಿಯಲ್ಲಿ ಪ್ರತಿವರ್ಷದಂತೆ ಅಂಬೇಡ್ಕರ್ ಮತ್ತು ಬುದ್ಧ ಜಯಂತಿಗೆ ಸರ್ಕಾರಿ ರಜೆಗಳನ್ನು ಕ್ಯಾನ್ಸಲ್ ಮಾಡಿ ಆ ರಜೆಗಳನ್ನು ಬಾಲಗಂಗಾಧರನಾಥತಿಲಕ್ ಮತ್ತು ದೀಪಾವಳಿ ಹಬ್ಬಕ್ಕೆ ರಜೆಗಳನ್ನಾಗಿ ಘೋಷಿಸಿದರು ಇದರಿಂದ ಎಸ್ ಸಿ ಎಸ್ ಟಿ ನೌಕರರು ಬಹಳ ವಿಚಲಿತರಾದರು ಆದರೆ ಯಾರು ಅದನ್ನು ಪ್ರಶ್ನೆ ಮಾಡುವ ಧೈರ್ಯ ಇರಲಿಲ್ಲ ಆದರೆ ಅದೇ ಆಫೀಸ್ ನಲ್ಲಿ ಡೀ ದರ್ಜೆ ಯಾಗಿ ಕೆಲಸ ಮಾಡುವ ಭಂಗಿ ಜಾತಿಗೆ ಸೇರಿದ "ದಿನಾಬಾನ"ಕಾರ್ಮಿಕ ಕಲ್ಯಾಣ ಸಮಿತಿಗೆ ಚುನಾಯಿತ ಪ್ರತಿನಿಧಿ ಯಾಗಿದ್ದರು ಇದಕ್ಕೆ ಅವರು ಆಕ್ಷೇಪ ವ್ಯಕ್ತಪಡಿಸಿದರು ಇದಕ್ಕೆ ಆ ಕಛೇರಿಯ ಅಥವಾ ಅಪೆಕ್ಸ್ ಕಮಿಟಿಯ ಚೇರ್ಮನ್ ಸಿ ರಾಮಚಂದ್ರನ್ ಮತ್ತು ವರದಾಚಾರಿಗೆ ದಿನಾಬಾನು ಮೇಲೆ ದೂರು ನೀಡಿದರು ಆ ದೂರಿನ ಮೇರೆಗೆ ದಿನಬಾನುರವರನ್ನು ಸರ್ಕಾರಿ ಕೆಲಸದಿಂದ ಸಸ್ಪೆಂಡ್ ಮಾಡಿದರು ದಿನಬಾನುರವರು ಮತ್ತು ಕೆಲವು ನೌಕರರುನ್ನ ಸಭೆಗೆ ಕರೆದು ನಿಮಗೆ ಸರ್ಕಾರಿ ಕೆಲಸ ಬೇಕು ಇಲ್ಲ ಅಂಬೇಡ್ಕರ್ ಜಯಂತಿಗೆ ಮತ್ತು ಬುದ್ಧ ಜಯಂತಿಗೆ ರಜಾ ಬೇಕು ಎಂದು ನೀವೇ ನಿರ್ಧಾರ ಮಾಡಿಕೊಳ್ಳಿ ಎಂದಾಗ ಬಹಳ ಜನ ನೌಕರರು ಸುಮ್ಮನೆ ಆದರು ಆದರೆ ದಿನಬಾನು ಮಾತ್ರ ನನಗೆ ಸರ್ಕಾರಿ ಕೆಲಸನ್ನು ಬೇಕು ರಜಾನು ಬೇಕು ಎಂದು ಪಟ್ಟು ಹಿಡಿದನು ಆಗ ಕೆಲಸದಿಂದ ವಜಾ ಗೊಳಿಸಿದರು ಇದನ್ನು ಗಮನಿಸಿದ ಮಾನ್ಯವರ್ ಕಾನ್ಷೀರಾಂಜೀ ರವರು ದಿನ ಬಾನು ರವರ ಸಹಾಯಕ್ಕೆ ಬಂದರು ಮತ್ತು ಆತನ ಧೈರ್ಯವನ್ನು ಮೆಚ್ಚಿಕೊಂಡರು ಅವತ್ತಿನ ಕೇಂದ್ರ ರಕ್ಷಣಾ ಮಂತ್ರಿಯಾಗಿದ್ದ ವೈ ಬಿ ಚೌಹಾನ್ ಭೇಟಿ ಮಾಡಿ ದೂರು ನೀಡಿ ದಿನ ಬಾನು ರವರಿಗೆ ಕೆಲಸವನ್ನು ಕೊಡಿಸಿದರು ಮತ್ತು ಅಂಬೇಡ್ಕರ್ ಮತ್ತು ಬುದ್ಧ ಜಯಂತಿಗೆ ರಜೆಗಳು ಘೋಷಣೆ ಮಾಡಿಸಿದರು ಇದರಿಂದ ಅಲ್ಲಿ ಕೆಲಸ ಮಾಡುತ್ತಿದ್ದ ಮೇಲಾಧಿಕಾರಿಗಳಾದ ವರದಾ ಚಾರ್ ಮತ್ತು ರಾಮಚಂದ್ರನ್ ಇಬ್ಬರು ಕೋಪಗೊಂಡರು ಕಾನ್ಷೀರಾಂಜೀ ರವರಿಗೆ ಬುದ್ಧಿ ಹೇಳಲು ತನ್ನ ರೂಮಿಗೆ ಕರೆಸಿಕೊಂಡು ನೀನು ಯಾಕೆ ಆ ಮಹರ್ ಗಳಿಗೆ ಸಹಾಯ ಮಾಡುತ್ತೀಯ ಎಂದು ಕೇಳಿದರು ಆಗ ಕಾನ್ಷೀರಾಂ ಜಿ ಅಂಬೇಡ್ಕರ್ ರವರು ರಾಷ್ಟ್ರ ನಾಯಕರಲ್ಲವೇ ಎಂದ ತಕ್ಷಣ ಮೇಲಧಿಕಾರಿಗಳು ಅಂಬೇಡ್ಕರ್ ರಾಷ್ಟ್ರ ನಾಯಕರಲ್ಲ ಆ ಲೋಫರ್ ನಿಂದಲೇ ಈ ದಲಿತರಿಗೆ ಕೊಬ್ಬು ಬಂದಿದೆ ಅವರಿಂದ ದೇಶ ಹಾಳಾಗುತ್ತಿದೆ ಎಂದು ಹೇಳಿದ ತಕ್ಷಣ ಮೇಲಾಧಿಕಾರಿಗಳ ಮೇಲೆ ಕೈ





ಮಾಡುತ್ತಾರೆ ಮತ್ತು ಮನಸೋಇಚ್ಛೆ ಚೆನ್ನಾಗಿ ಹೊಡೆಯುತ್ತಾರೆ ಹಾಗೂ ಹಲ್ಲೇ ಮಾಡಿದ್ದರಿಂದ ದಾದಾಸಾಹೇಬ್ ಕಾನ್ಷೀರಾಂ ಜಿ ರವರನ್ನು ಕೆಲಸದಿಂದ ಸಸ್ಪೆಂಡ್ ಮಾಡುತ್ತಾರೆ ಆ ದಿನ ರಾತ್ರಿ ಆ ಕಚೇರಿಯಲ್ಲಿ ಕೆಲಸ ಮಾಡುವ ಇತರೆ ಸರ್ಕಾರಿ ನೌಕರರಾದ ಸಮಾಧಾನ ಮಾಡಲು ಮಹಮ್ಮದ್ ಗೈನಿ ,ದಿನಬಾನು ,ಡಿಕೆ ಕಾಪರ್ ಡೇ ,ಮಧು ತಂಬಾಕೆ, ಎಂಬುವವರು ಬಂದು ಸಮಾಧಾನ ಮಾಡಿ ಜಾತಿ ವಿನಾಶ ಎಂಬ ಪುಸ್ತಕವನ್ನು ಕಾನ್ಷೀರಾಂಜೀ ರವರು ಆ ದಿನ ರಾತ್ರಿ ಮೂರು ಬಾರಿ ಓದುತ್ತಾರೆ ಮೇಲಾಧಿಕಾರಿಗಳಾದ ಮೂರರಿಂದ ಐದು ಜನ ಬ್ರಾಹ್ಮಣ ಅಧಿಕಾರಿಗಳನ್ನು ಕೊಂದು ಜೈಲಿಗೆ ಹೋದರೆ ಏನು ಪ್ರಯೋಜನ ಇಲ್ಲ ಈ ಭಾರತ ದೇಶದಲ್ಲಿ ಬ್ರಾಹ್ಮಣ್ಯವನ್ನು ಬ್ರಾಹ್ಮಣ ವಾದವನ್ನು ಕೊಲ್ಲಬೇಕು ಎಂದು ತೀರ್ಮಾನ ಮಾಡಿ ತನ್ನ ತಾಯಿ ಗೆ 24 ಪುಟಗಳಷ್ಟು ಕಾಗದವನ್ನು ಬರೆದು ಮನೆಯವರ ಪಾಲಿಗೆ ಸತ್ತು ಹೋಗಿದ್ದೇನೆ ಎಂದು ತಿಳಿದುಕೊಳ್ಳಿ ನಾನು ಬದುಕಿದ್ದರೆ ಡಾಕ್ಟರ್ ಬಿಆರ್ ಅಂಬೇಡ್ಕರ್ ಅವರ ಹೋರಾಟದ ವಿಮೋಚನ ರಥವನ್ನು ಹಾಗೂ ಅಂಬೇಡ್ಕರ್ ವಾದವನ್ನು ಮುನ್ನಡೆಸುವುದೇ ನನ್ನ ಗುರಿ ಎಂದು ತನ್ನಷ್ಟಕ್ಕೆ ತಾನೇ ಕೆಲವು ಪ್ರತಿಜ್ಞೆಯನ್ನು ಹಾಕಿಕೊಳ್ಳುತ್ತಾರೆ ನಾನು ಮದುವೆಯಾಗುವುದಿಲ್ಲ ನಾನು ವೈಯಕ್ತಿಕವಾಗಿ ಯಾವುದೇ ಹಣ ಆಸ್ತಿ ಸಂಪತ್ತು ಹೊಂದುವುದಿಲ್ಲ ನನ್ನ ರಕ್ತ ಸಂಬಂಧಿಗಳ ಜೊತೆ ಭಾವನಾತ್ಮಕ ಸಂಬಂಧವನ್ನು ಇಟ್ಟುಕೊಳ್ಳುವುದಿಲ್ಲ ಸ್ವಂತ ಮನೆ ಮಠ ಬ್ಯಾಂಕಿನ ಖಾತೆಯನ್ನು ಹೊಂದುವುದಿಲ್ಲ ಎಂದು ಶಪತ ಮಾಡುತ್ತಾರೆ ನಾನು ಬದುಕಿದ್ದರೆ ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸನ್ನು ನನಸು ಮಾಡುವವರೆಗೂ ಕೆಲಸ ನಿಲ್ಲಿಸುವುದಿಲ್ಲ ನನ್ನ ಸಮಾಜ ಬಹುಜನ ಸಮಾಜ ನನ್ನ ಮನೆ ಬಹುಜನ ಸಮಾಜದ ಮನೆಗಳು ಎಂದು ಹೇಳಿ ಅದೇ ರೀತಿ ನಡೆದುಕೊಂಡರು

1971 ಏಪ್ರಿಲ್ 14 ರಂದು ಎಸ್ ಸಿ ಎಸ್ ಟಿ ಓ ಬಿ ಸಿ ಅಲ್ಪಸಂಖ್ಯಾತ ನೌಕರರ ಸಂಘವನ್ನ ಅಂದರೆ ಬಾಂಸೆಪ್ ಸ್ಥಾಪಿಸಿದರು ಇದರ ಅಡಿಯಲ್ಲಿ ಅಂಬೇಡ್ಕರ್ ಅವರ ವಿಚಾರಗೋಷ್ಠಿಗಳನ್ನ ಸೆಮಿನಾರ್ಗಳನ್ನ ಭಾರತ ದೇಶದ ಆರ್ಥಿಕ ವ್ಯವಸ್ಥೆಯನ್ನು ಈ ದೇಶದ ಹಿಂದುಳಿದ ವರ್ಗಗಳು ಪರಸ್ಥಿತಿಯನ್ನು ದಲಿತರ ಪರಿಸ್ಥಿತಿಯನ್ನು ಅರ್ಥ ಮಾಡಿಸಿದರು ಈ ಸಂಘದ ಮೂಲಕ ಪೇ ಬ್ಯಾಕ ಟೂ ಸೊಸೈಟಿ ಗೋ ಬ್ಯಾಕ್ ಟೂ ಸೊಸೈಟಿ ಎಂಬ ಘೋಷಣೆಯೊಂದಿಗೆ ಆರಂಭಿಸಿದ ನೌಕರರ ಸಂಘ ಇಡೀ ದೇಶದಲ್ಲಿ ರೈಲ್ವೆ ಲಾಂಯರಿ ಬಸ್ಸು ತಿರುಗಿ ನೌಕರರನ್ನು ಸಂಘಟಿಸಿ ನಿಜವಾದ ಅಂಬೇಡ್ಕರ್ ವಾದವನ್ನು ಹೇಳಿದರು ಓಟಿನ ಮಹತ್ವವನ್ನು ತಿಳಿಸಿದರು ಇಡೀ ಉತ್ತರ ಭಾರತದ ಎಲ್ಲಾ ರಾಜ್ಯಗಳು ಬಹುಬೇಗನೆ ಕಾನ್ ರಾಮ್ ಜಿ ರವರು ಪರಿಚಯವಾದರು ನಂತರದ ದಿನಗಳಲ್ಲಿ ಈ ದೇಶದ ಎಲ್ಲಾ ಸಮಸ್ಯೆಗಳಿಗೆ ರಾಜ್ಯಕೀಯ ಅಧಿಕಾರ ಮುಖ್ಯ ಎಂದು ತಿಳಿದು ಸಾಮಾನ್ಯ ಜನರಿಗೆ ದಲಿತ್ ಸೊಶಿತ್ ಸಮಾಜ ಸಂಘರ್ಷ ಸಮಿತಿ ಎಂಬ ಸಂಘವನ್ನು ಸ್ಥಾಪಿಸಿದರು ಅದರಲ್ಲಿ ಒಂದು ವೋಟು ಕೊಡು ಒಂದು ನೋಟು ಕೊಡು. ಎನ್ನುವ ಘೋಷಣೆಯೊಂದಿಗೆ ಇಡೀ ಉತ್ತರ ಭಾರತದ ಅತ್ಯಂತ ಒಂದು ಸೈಕೋಲ್ನಲ್ಲಿ ಮೂರು ಸಾವಿರದ ನಾನೂರು ಕಿಲೋಮೀಟರ್ ಅಂದರೆ ಸುಮಾರು 9 ರಾಜ್ಯಗಳಲ್ಲಿ ಓಡಾಡಿ ಸೆಮಿನಾರ್ಗಳ ಮತ್ತು ವಿಚಾರಗೋಷ್ಠಿಗಳ ಮುಖಾಂತರ ಅಂಬೇಡ್ಕರ್ ಅವರ ವಿಚಾರಗಳನ್ನು ತಿಳಿಸಿದರು ಮುಂದೆ ಏಪ್ರಿಲ್ 14 1984 ರಂದು ಬಿಎಸ್ಪಿ ಸಂಸ್ಥಾಪನೆ ಮಾಡಿದರು ಬಿಎಸ್ಪಿಎ ರಾಜಕೀಯ ಪಕ್ಷ ಬಹುಜನ ಸಮಾಜ ಪಾರ್ಟಿ ಎಂದು ಹೆಸರಿಟ್ಟು ಈ ಭಾರತ ದೇಶದಲ್ಲಿ ಕೇವಲ ಬ್ರಾಹ್ಮಣ ಬನ್ನಿಯ ವೈಶ್ಯ ಇವರು 15 ಪರ್ಸೆಂಟ್ ಇದ್ದಾರೆ ಇನ್ನು 85% ಇರುವ ಶೂದ್ರಾತಿಶೂದ್ರರು, ಎಸ್ಸಿ ಎಸ್ಟಿ ಅಲ್ಪಸಂಖ್ಯಾತ ಸಮುದಾಯಗಳು ಜಾಸ್ತಿ ಇರುವುದರಿಂದ ಇವರನ್ನು ಬಹುಜನ ಎಂದು ಕರೆಯುತ್ತೇನೆ ಈ ದೇಶದ ಸಂವಿಧಾನದಲ್ಲಿ ಯಾವ ಸಮುದಾಯಕ್ಕೆ ಎಷ್ಟು ಇದ್ದಾರೆ ಅಷ್ಟು ಅಧಿಕಾರ ಸಿಗಬೇಕು ಎಂದು ಸಂವಿಧಾನ ಹೇಳುತ್ತದೆ ಆದುದರಿಂದ ಅಲ್ಪ ಜನರು ಬಹು ಜನರನ್ನ ಆಳ್ವಿಕೆ ಮಾಡುತ್ತಿದ್ದಾರೆ ಈ ಬಹು ಜನರು ಈ ದೇಶವನ್ನು ಹಾಳಬೇಕು ಎಂದು ಬಾಬಾ ಸಾಹೇಬ್ ಅಂಬೇಡ್ಕರ್ ಅವರ ಕನಸು ನನಸು ಮಾಡಬೇಕು ಎಂದು ಊರದುಂಬಿಸುತ್ತಿದ್ದರು ಮತ್ತು ನನಗೆ ಒಂದು ವೋಟು ಕೊಡುವ ಮೊದಲು ಒಂದು ನೋಟನ್ನು ಕೊಡಬೇಕು ಯಾಕೆಂದರೆ ಯಾವ ಸಮಾಜ ವೋಟುಗಳನ್ನ ಮಾರುಕೊಳ್ಳುತ್ತದೆಯೋ ಆ ಸಮಾಜ ಯಾವತ್ತೂ ಉದ್ದಾರವಾಗುವುದಿಲ್ಲ ಆದ್ದರಿಂದ ವೋಟನ್ನು ಮಾರಿಕೊಳ್ಳಬೇಡಿ ನೀವು ನನ್ನ ಪಕ್ಷದ ಆನೆ ಗುರುತಿಗೆ ಮತ ನೀಡಿ ನಿಮ್ಮ ಅಭಿವೃದ್ಧಿಯನ್ನು ನಮಗೆ ಬಿಡಿ ಎಂದು ಹೇಳುತ್ತಿದ್ದರು ಕಾನ್ಷೀರಾಂಜೀ ರವರು ಪಾರ್ಟಿ ಕಟ್ಟಿದ ಹಣದ ಸಮಸ್ಯೆನೇ ನನಗೆ ಇಲ್ಲ ಈ ದೇಶದ 85% ಬಹು ಜನರು ಒಂದು ಟೈಮ್ ಟೀ ಕುಡಿಯುವುದನ್ನು ನಿಲ್ಲಿಸಿ ಕೇವಲ ಹತ್ತು ರೂಪಾಯಿ ಕೊಟ್ಟರೆ ನಾನು ಆರ್‌ಬಿಐಗೆ ಸಾಲ ಕೊಡುತ್ತೇನೆ ಚುನಾವಣೆ ಮಾಡಲು ನನಗೆ ಬೇಕಾದಷ್ಟು ಹಣ ಇದೆ ಎಂದು ಅವತ್ತಿನ ರಾಜಕೀಯ ಪಕ್ಷಗಳಿಗೆ ಭಯ ಹುಟ್ಟಿಸುತ್ತಿದ್ದರು 1994 ರಲ್ಲಿ ಉತ್ತರ ಪ್ರದೇಶದಲ್ಲಿ ನಡೆದ ರಾಜ್ಯಕೀಯ ವಿದ್ಯಮಾನಗಳಿಂದ 1995 ರಲ್ಲಿ ಪ್ರಪ್ರಥಮ ಬಾರಿಗೆ ಈ ದೇಶಕ್ಕೆ ಅಂಬೇಡ್ಕರ್ ಅವರ ಸಿದ್ಧಾಂತ ಹಾಗೂ ಅಂಬೇಡ್ಕರ್ ವಾದ ಒಪ್ಪಿಕೊಂಡಿರುವ ಸ್ವಾಭಿಮಾನದ ಪಕ್ಷವಾದ ಬಹುಜನ್ ಸಮಾಜ ಪಕ್ಷದಿಂದ ದಲಿತ ಸಮುದಾಯಕ್ಕೆ ಸೇರಿದ ಮಾಯಾವತಿಯವರನ್ನು ಮುಖ್ಯಮಂತ್ರಿಯನ್ನಾಗಿ ಮಾಡಿದ ಕೀರ್ತಿ ದಾದಾ ಸಾಹೇಬರಿಗೆ ಸಲ್ಲಬೇಕು ಹೀಗೆ ಅವರು ಮುಂದೆ ಇಡೀ ಭಾರತ ದೇಶವನ್ನು ಸುತ್ತಿ ಕೆಲಸ ಮಾಡಿ ಮೂರನೇ ರಾಷ್ಟ್ರೀಯ ಪಕ್ಷವನ್ನಾಗಿ ಮಾಡುತ್ತಾರೆ ಉತ್ತರ ಪ್ರದೇಶದಲ್ಲಿ ಈ ಪಕ್ಷದಿಂದ ನಾಲ್ಕು ಬಾರಿ ಮಾಯಾವತಿಯವರು ಮುಖ್ಯಮಂತ್ರಿಯಾಗಿ ದಲಿತರಿಗೆ ಹಿಂದುಳಿದವರಿಗೆ ಅಲ್ಪಸಂಖ್ಯಾತರಿಗೆ ಎಲ್ಲಾ ಜಾತಿಯ ಬಡವರಿಗೆ ರಕ್ಷಣೆ ಕೊಡುತ್ತಾರೆ ಮೂಲಭೂತ ಸೌಲಭ್ಯಗಳನ್ನ ಒದಗಿಸುತ್ತಾರೆ ಇವೆಲ್ಲವೂಕಾನ್ಷೀರಾವ್ ಜೀ ರವರ ದೂರದೃಷ್ಟಿ ಕಾನ್ಷೀರಾಂಜೀ ರವರು ಘೋಷಣೆಗಳು ಅಮರ ರಹೇ ಅಮರ ರಹೇ ಅಂಬೇಡ್ಕರ್ ಅಮರ ರಹೇ, ಜಿಸ್ಕಿ ಜಿತಣಿ ಸಂಖ್ಯಾ ಬಾರಿ ಉಸ್ಕಿ ಉತಿನ್ನಿ ಭಾಗಿದಾರೀ , ಮಂಡಲ್ ವರದಿ ಜಾರಿಕರೋ ನಹಿತು ಕುರ್ಚಿ ಖಾಲಿ ಕರೋ ಜಿಂದಾಬಾದ್ ಜಿಂದಾಬಾದ್ ಬಿ ಎಸ ಪಿ ಜಿಂದಾಬಾದ್ ದೇಶ ಕೀ ಮಜಬೂರಿ ಹೈ ಬಿ ಎಸ್ ಪಿ ಜರೂರಿ ಹೈ ಎಂದು ಘೋಷಣೆಗಳನ್ನು ಕೊಟ್ಟು ವಿರೋಧಿ ಪಕ್ಷಗಳಿಗೆ ನಡಕವನ್ನುಂಟು ಮಾಡಿಸಿದ ಕೀರ್ತಿ ದಾದಾ ಸಾಹೇಬರಿಗೆ ಸಲ್ಲಬೇಕು ಮತ್ತು ರಾಷ್ಟ್ರಪತಿ ಹುದ್ದೆ ಉಪರಾಷ್ಟ್ರಪತಿ ಹುದ್ದೆ ಉಪ ಪ್ರಧಾನಿ ಗೃಹ ಸಚಿವ ಅಂತಹ ಸ್ಥಾನಗಳು ನಿರಾಕರಿಸಿ ನಾನು ಈ ದೇಶಕ್ಕೆ ಪ್ರಧಾನಿ ಮಾತ್ರ ಆಗುತ್ತೇನೆ ಅದು ಬಿಟ್ಟು ಬೇರೆ ಯಾವುದೇ ನನಗೆ ಬೇಡ ಸಮಾಜ ಪರಿವರ್ತನೆ ನಿಧಾನಕ್ಕೆ ಆಗುತ್ತೆ ನನಗೆ ರಾಜಕೀಯ ಆತರ ವಿಲ್ಲ ಸಮಾಜ ಬದಲಾವಣೆಯಾಗಬೇಕು ಸಮುದಾಯ ಸಮಾಜ ಗಟ್ಟಿಯಾಗಿದ್ದರೆ ನಾಯಕ ಗಟ್ಟಿಯಾಗುತ್ತಾನೆ ಮಾರಾಟವಾಗದೆ ಇರುವ ಸಮಾಜದಲ್ಲಿ ಮಾರಾಟವಾಗದ ನಾಯಕ ಹುಟ್ಟುತ್ತಾನೆ ಎಂದು ದಾದಾಸಾಹೇಬರು ಘೋಷಣೆಗಳನ್ನು ಕೊಡುತ್ತಾರೆ ಅಂತಿಮವಾಗಿ ಅಕ್ಟೋಬರ್ ಒಂಬತ್ತು 2006 ರಂದು ಕಾನ್ ರಾಮ್ ಜಿ ರವರು ಪರ ನಿಬ್ಬಾಣ ಹೊಂದುತ್ತಾರೆ ಜೈ ಭೀಮ್ ಜೈ ಭಾರತ್ ಜೈ ಕಾನ್ಷೀ ರಾಮ್ .

ರಂಗಧಾಮಯ್ಯ ಜೆಸಿ ಜನಕ ಲೋಟಿ
,
ವಕೀಲರು ಹಾಗೂ ರಾಜ್ಯಶಾಸ್ತ್ರ ಉಪನ್ಯಾಸಕರು ತುಮಕೂರು
99 640 76 203



# ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ಕೊರತೆಗಳಿಲ್ಲ

## ಜನಪ್ರತಿನಿಧಿಗಳ ಬೆಂಬಲವಿಲ್ಲದೆ ನಕಲಿ ವೈದ್ಯರ ಹಾವಳಿ ಹೆಚ್ಚಾಗುವುದಿಲ್ಲ-ಸಚಿವ ಖಾದರ್

ತುಮಕೂರು: ಸರ್ಕಾರಿ ಆಸ್ಪತ್ರೆಗಳಲ್ಲಿ ಶೇ.95ರಷ್ಟು ಎಲ್ಲಾ ಸವಲತ್ತುಗಳಿದ್ದು, ಯಾವುದೇ ಕೊರತೆಗಳಿಲ್ಲ ಎಂದು ಆರೋಗ್ಯ ಸಚಿವ ಯು.ಟಿ. ಖಾದರ್ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಚೇರಿಯಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಸರ್ಕಾರಿ ಆಸ್ಪತ್ರೆಗಳಲ್ಲಿ ಯಾವುದೇ ಲೋಪದೋಷ, ಸಮಸ್ಯೆಗಳಿದ್ದಲ್ಲಿ ಕೂಡಲೇ ಗಮನಕ್ಕೆ ತರಬೇಕೆಂದು ಅಧಿಕಾರಿಗಳೊಂದಿಗೆ ಈಗಾಗಲೇ ಸಭೆ ನಡೆಸಿ ಸೂಚನೆ ನೀಡಿದ್ದೇನೆ. ಜಿಲ್ಲೆಯಲ್ಲಿರುವ ಎಲ್ಲಾ ಸಾರ್ವಜನಿಕ ಆಸ್ಪತ್ರೆ, ತಾಯಿ ಮತ್ತು ಮಕ್ಕಳ ಆಸ್ಪತ್ರೆ, ಪ್ರಾಥಮಿಕ ಆರೋಗ್ಯ ಕೇಂದ್ರಗಳು ಜನರಿಗೆ ಉತ್ತಮ ಆರೋಗ್ಯ ಸೇವೆಗಳನ್ನು ನೀಡುತ್ತಿವೆ ಎಂದು ತಿಳಿಸಿದರಲ್ಲದೆ, ಸಾರ್ವಜನಿಕ ಆಸ್ಪತ್ರೆಗಳಲ್ಲಿ ಔಷಧಿ ಕೊರತೆ, ವೈದ್ಯರು ಹಾಗೂ ಫಾರ್ಮಸಿಸ್ಟ್‌ಗಳ ಕೊರತೆಯಿದ್ದಲ್ಲಿ ಪ್ರಸ್ತಾವನೆ ಸಲ್ಲಿಸಿದಲ್ಲಿ ಔಷಧಿಗಳ ಪೂರೈಕೆ ಮತ್ತು ಹುದ್ದೆಗಳ ಭರ್ತಿಗೆ ಕ್ರಮ ಕೈಗೊಳ್ಳಲಾಗುವುದು ಎಂದರು.

ಜಿಲ್ಲೆಯಲ್ಲಿ ನಕಲಿ ವೈದ್ಯರ ಹಾವಳಿ ಹೆಚ್ಚಾಗಿದೆ ಎಂಬ ಪತ್ರಕರ್ತರ ದೂರಿಗೆ ಪ್ರತಿಕ್ರಿಯಿಸಿದ ಸಚಿವರು, ಯಾವುದೇ ಜಿಲ್ಲೆಯಲ್ಲಿ ಸ್ಥಳೀಯ ಡಿಹೆಚ್‌ಓ, ಟಿಹೆಚ್‌ಓ, ಜಿಲ್ಲಾ ಆಯುಷ್ ಅಧಿಕಾರಿ ಹಾಗೂ ಜನಪ್ರತಿನಿಧಿಗಳ ಬೆಂಬಲವಿಲ್ಲದೆ ನಕಲಿ ವೈದ್ಯರ ಹಾವಳಿ ಹೆಚ್ಚಾಗುವುದಿಲ್ಲ. ನಕಲಿ ವೈದ್ಯರನ್ನು ನಿಯಂತ್ರಿಸಲು



ಅಧಿಕಾರಿಗಳೊಂದಿಗೆ ಸ್ಥಳೀಯ ಜನಪ್ರತಿನಿಧಿಗಳ ಸಹಕಾರ ಅಗತ್ಯ, ಆಯುರ್ವೇದ, ಯುನಾನಿ, ಹೋಮಿಯೋಪತಿ ವೈದ್ಯರು ನಕಲಿ ವೈದ್ಯರಲ್ಲ. ಆದರೆ ಇವರು ಶಸ್ತ್ರಚಿಕಿತ್ಸೆ ಮಾಡಲು ಅವಕಾಶವಿಲ್ಲವೆಂದು ಸ್ಪಷ್ಟಪಡಿಸಿದರು.

ಜಿಲ್ಲೆಗೆ ಹೃದ್ರೋಗ ಆಸ್ಪತ್ರೆ ಅವಶ್ಯಕತೆಯಿದೆ ಎಂದು ಮಾಧ್ಯಮದವರ ಬೇಡಿಕೆಗೆ ಉತ್ತರಿಸಿದ ಅವರು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯನ್ನಾಗಿ ಮೇಲ್ದರ್ಜೆಗೇರಿಸಲಾಗುತ್ತಿರುವ ಜಿಲ್ಲಾಸ್ಪತ್ರೆಯಲ್ಲಿ ಹೃದ್ರೋಗಿಗಳಿಗೆ ತುರ್ತು ಚಿಕಿತ್ಸೆ ನೀಡಲು ಪ್ರತ್ಯೇಕ ವಿಭಾಗವನ್ನು ತೆರೆಯಲು ಕ್ರಮ ಕೈಗೊಳ್ಳಲಾಗುವುದು ಹಾಗೂ ಜಿಲ್ಲೆಯಲ್ಲಿರುವ ಕ್ಯಾನ್ಸರ್ ಆಸ್ಪತ್ರೆಗೆ ವೈದ್ಯಕೀಯ ಉಪಕರಣಗಳನ್ನು ಅಳವಡಿಸಲು ಶೀಘ್ರದಲ್ಲೇ ಕ್ರಮವಹಿಸಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕ ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಉತ್ತಮ ಚಿಕಿತ್ಸೆ ನೀಡುವಲ್ಲಿ ವಿಳಂಬವಾಗಬಾರದು ಎಂಬ ದೃಷ್ಟಿಯಿಂದ ಅಧಿಕಾರಿ/ಸಿಬ್ಬಂದಿಗಳ ಹಾಜರಾತಿ ಮೇಲೆ ನಿಗಾವಹಿಸಲು ಎಐ ಅಟೆಂಡೆನ್ಸ್ ಕ್ಯಾಮೆರಾಗಳನ್ನು ಅಳವಡಿಸುವ ಚಿಂತನೆ ಮಾಡಲಾಗಿದೆ ಎಂದರಲ್ಲದೆ, ಸಾರ್ವಜನಿಕರೂ ಸಹ ಆಹಾರ ಶೈಲಿಯನ್ನು ಬದಲಾಯಿಸಿಕೊಂಡು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು. ಅತಿಯಾದ ಎಣ್ಣೆ, ಉಪ್ಪು, ಸಕ್ಕರೆ ಸೇವಿಸದಂತೆ ಗಮನಹರಿಸಬೇಕು. ಜನರ ಆರೋಗ್ಯ ದೃಷ್ಟಿಯಿಂದ ಹೋಟೆಲ್, ಬೀದಿ ಬದಿಯಲ್ಲಿ ತಿಂಡಿ-ತಿನಿಸುಗಳನ್ನು ಮಾರಾಟ ಮಾಡುವವರು ಬ್ರಾಂಡೆಡ್ ಎಣ್ಣೆಯನ್ನೇ ಬಳಸಬೇಕು ಎಂಬ ನಿಯಮವನ್ನು ಜಾರಿಗೆ ತರಲಾಗುವುದು ಎಂದು ತಿಳಿಸಿದರು.

ಇದಕ್ಕೂ ಮುನ್ನ ಜರುಗಿದ ಸಭೆಯಲ್ಲಿ ಆರೋಗ್ಯ ಕಾರ್ಯಕ್ರಮ/ಯೋಜನೆಗಳ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಪ್ರಗತಿ ಪರಿಶೀಲನೆ ನಡೆಸಿದ ಸಚಿವರು, ಸಾರ್ವಜನಿಕರಿಗೆ ಉತ್ತಮ ಆರೋಗ್ಯ ಸೇವೆ ನೀಡುವುದೇ ಇಲಾಖೆಯ ಮುಖ್ಯ ಗುರಿಯಾಗಬೇಕು. ಉತ್ತಮ ಆರೋಗ್ಯ ಸೇವೆ ನೀಡುವಲ್ಲಿ ಇಲಾಖೆಯ ಡಿ-ದರ್ಜೆ ನೌಕರರು ಸೇರಿದಂತೆ ಎಲ್ಲಾ ಅಧಿಕಾರಿ/ಸಿಬ್ಬಂದಿ ಸಮನ್ವಯತೆಯಿಂದ ಕಾರ್ಯ ನಿರ್ವಹಿಸಬೇಕು. ಎಲ್ಲಾ ಆರೋಗ್ಯ ಕಾರ್ಯಕ್ರಮಗಳು ಜಿಲ್ಲಾ/ ತಾಲ್ಲೂಕು ಆಸ್ಪತ್ರೆಯಲ್ಲದೆ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿಯೂ ಅನುಷ್ಠಾನವಾಗಬೇಕು ಎಂದು ಸೂಚನೆ ನೀಡಿದರು.

ಜಿಲ್ಲೆಯಲ್ಲಿ ಖಾಲಿಯಿರುವ ಹುದ್ದೆಗಳ ಸಂಖ್ಯೆ, ಕಾರ್ಯ ನಿರ್ವಹಿಸುತ್ತಿರುವ ಪಿಹೆಚ್‌ಸಿಗಳ ಸಂಖ್ಯೆ ಬಗ್ಗೆ ಮಾಹಿತಿ ಪಡೆದ ಅವರು, ತಾಲ್ಲೂಕು ಆಸ್ಪತ್ರೆಗಳ ಸಮೀಪವಿರುವ 24★7 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಅಗತ್ಯ ವಿರುವ ಕಡೆಗೆ ಸ್ಥಳಾಂತರಿಸಬೇಕು. ಇದರಿಂದ ತುರ್ತು ಪರಿಸ್ಥಿತಿಗಳಲ್ಲಿ ಉತ್ತಮ ಸೇವೆ ನೀಡಬಹುದು. ಎಲ್ಲಾ ಆಸ್ಪತ್ರೆಗಳಲ್ಲಿ ಸ್ವಚ್ಛತೆಯನ್ನು ಕಾಪಾಡಬೇಕು ಎಂದು ತಿಳಿಸಿದರಲ್ಲದೆ, ತಾಲ್ಲೂಕು ಆರೋಗ್ಯಾಧಿಕಾರಿಗಳು ಮಧ್ಯಾಹ್ನ 1 ಗಂಟೆಯ ನಂತರ ಕಚೇರಿಯಲ್ಲಿ ಇರುವುದೇ ಇಲ್ಲ ಎಂಬ ದೂರುಗಳು ಬರುತ್ತಿವೆ. ಸಾರ್ವಜನಿಕರಿಂದ ದೂರುಗಳು ಬಾರದಂತೆ ಆರೋಗ್ಯಾಧಿಕಾರಿಗಳು ಕಾರ್ಯನಿರ್ವಹಿಸಬೇಕು. ತಾಲ್ಲೂಕು ಆರೋಗ್ಯಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಿಗೆ ಭೇಟಿ ನೀಡಿ ಸಮಸ್ಯೆಗಳಿದ್ದಲ್ಲಿ ಬಗೆಹರಿಸುವ ಕ್ರಮ ಕೈಗೊಳ್ಳಬೇಕು. ಸ್ಥಳೀಯ ಜನಪ್ರತಿನಿಧಿ, ಸಂಘ-ಸಂಸ್ಥೆ, ಜನ ಸಮುದಾಯವನ್ನೊಳಪಡಿಸಿಕೊಂಡು ಸಭೆ ನಡೆಸಿ ಸಮಸ್ಯೆಗಳ ನಿವಾರಣೆಗೆ ಪ್ರಯತ್ನಿಸಬೇಕು ಎಂದು ನಿರ್ದೇಶನ ನೀಡಿದರು.

ಆರೋಗ್ಯ ಇಲಾಖೆಯ ಬಗ್ಗೆ ಜನರಲ್ಲಿ ವಿಶ್ವಾಸ ಮೂಡುವಂತೆ ಕೆಲಸ ಮಾಡಬೇಕು. ಎಲ್ಲಾ ಪಿಹೆಚ್‌ಸಿಗಳಲ್ಲಿ ಆರೋಗ್ಯ ಅರಿವು ಕಾರ್ಯಕ್ರಮಗಳನ್ನು ಏರ್ಪಡಿಸಬೇಕು. ಔಷಧಿಗಳ ಕೊರತೆಯಿರುವ ಪಿಹೆಚ್‌ಸಿಗಳು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ನಿರ್ದೇಶಕಿ ಡಾ|| ರಜನಿ, ಉಪನಿರ್ದೇಶಕ ಡಾ|| ಧನಂಜಯ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ|| ಬಿ.ಎಂ. ಚಂದ್ರಶೇಖರ್, ಜಿಲ್ಲಾ ಶಸ್ತ್ರಚಿಕಿತ್ಸಕ ಡಾ|| ಅಸ್ಗರ್ ಬೇಗ್ ಸೇರಿದಂತೆ ಸೇರಿದಂತೆ ವಿವಿಧ ತಾಲ್ಲೂಕು ಆರೋಗ್ಯಾಧಿಕಾರಿಗಳು, ಮತ್ತಿತರರು ಉಪಸ್ಥಿತರಿದ್ದರು.

## ಮೂರು ದಶಕಗಳ ಅಲೆದಾಟ: ಮಾಜಿ ಯೋಧನ ಕುಟುಂಬಕ್ಕೆ ಸಿಗದ ಭೂಮಿ;

# ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹದ ಎಚ್ಚರಿಕೆ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು: ದೇಶ ರಕ್ಷಣೆಗಾಗಿ ಗಡಿಯಲ್ಲಿ ಹೋರಾಡಿದ ಯೋಧನ ಕುಟುಂಬವೊಂದು ಕೃಷಿ ಭೂಮಿ ಮಂಜೂರಾತಿಗಾಗಿ ಬರೋಬ್ಬರಿ 30 ವರ್ಷಗಳಿಂದ ಕಚೇರಿಗಳಿಗೆ ಅಲೆದಾಡುತ್ತಿದ್ದರೂ ಅಧಿಕಾರಿಗಳು ಕ್ಯಾರೇ ಎನ್ನದಿರುವ ಅಮಾನವೀಯ ಘಟನೆ ಬೆಳಕಿಗೆ ಬಂದಿದೆ. ನ್ಯಾಯ ಸಿಗದಿದ್ದರೆ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹ ನಡೆಸುವುದಾಗಿ ಮೃತ ಯೋಧನ ಪತ್ನಿ ಸ್ವರೂಪ ರಾಣಿ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಆಯೋಜಿಸಲಾಗಿದ್ದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಂದಾಯ ಇಲಾಖೆ ಅಧಿಕಾರಿಗಳ ದಿವ್ಯ ನಿರ್ಲಕ್ಷ್ಯದ ವಿರುದ್ಧ ತೀವ್ರ ಆಕ್ರೋಶ ಹೊರಹಾಕಿದರು.

**ಹೋರಾಟದ ಹಿನ್ನೆಲೆ:**

ತುಮಕೂರು ಜಿಲ್ಲೆಯ ಕುಣಿಗಲ್ ತಾಲೂಕು, ಕೊತ್ತಗೆರೆ ಹೋಬಳಿಯ ಸೂಳೆಕುಪ್ಪೆ ಗ್ರಾಮದ ಲಿಂಗ ಸಿದ್ಧಯ್ಯ ಅವರು ಭಾರತೀಯ ಸೇನೆಯಲ್ಲಿ 18 ವರ್ಷಗಳ ಕಾಲ ಸೇವೆ ಸಲ್ಲಿಸಿ ಸ್ವಯಂ ನಿವೃತ್ತಿ ಪಡೆದಿದ್ದರು. ನಿವೃತ್ತಿಯ ಬಳಿಕ ಸ್ವಗ್ರಾಮದ ಸರ್ವೆ ನಂಬರ್ 12ರಲ್ಲಿರುವ 4 ಎಕರೆ ಸರ್ಕಾರಿ ಜಮೀನಿನಲ್ಲಿ ಕೃಷಿ ಮಾಡಿ ಜೀವನ ಸಾಗಿಸಲು ಉದ್ದೇಶಿಸಿ, ಭೂ ಮಂಜೂರಾತಿಗಾಗಿ



ತಹಶೀಲ್ದಾರ್ ಕಚೇರಿಗೆ ಅರ್ಜಿ ಸಲ್ಲಿಸಿ ನಿರಂತರವಾಗಿ ಓಡಾಡುತ್ತಿದ್ದರು. ಆದರೆ, 1998ರಲ್ಲಿ ಸಂಭವಿಸಿದ ರಸ್ತೆ ಅಪಘಾತದಲ್ಲಿ ಲಿಂಗಸಿದ್ಧಯ್ಯ ಅಕಾಲಿಕ ನಿಧನ ಹೊಂದಿದರು. ಪತಿಯ ನಿಧನದ ನಂತರ ಕುಟುಂಬದ ಜವಾಬ್ದಾರಿ ಹೊತ್ತ ಪತ್ನಿ ಸ್ವರೂಪರಾಣಿ ಅವರು ಭೂ ಮಂಜೂರಾತಿಗಾಗಿ ತಮ್ಮಿಬ್ಬರು ಮಕ್ಕಳು ಮತ್ತು ವೃದ್ಧ ತಾಯಿಯೊಂದಿಗೆ ಹೋರಾಟವನ್ನು ಮುಂದುವರಿಸಿದರು.

**ಅಧಿಕಾರಿಗಳ ನಿರ್ಲಕ್ಷ್ಯ, ಒತ್ತುವರಿದಾರರ ಪಾಲು:**

ಅರ್ಜಿ ಸಲ್ಲಿಸಿದ ಸುಮಾರು 9 ವರ್ಷಗಳ ನಂತರ, ಅಂದರೆ 2007ರಲ್ಲಿ ಅರ್ಜಿ ಮೊದಲ ಬಾರಿಗೆ ಕಡತ ಪರಿಶೀಲನೆಗೆ ಬಂದಿತು. 2008ರಲ್ಲಿ ತಹಶೀಲ್ದಾರ್‌ರಿಂದ ಸ್ಥಳ ಪರಿಶೀಲನೆಯೂ ಪೂರ್ಣಗೊಂಡಿತು. ಆದರೆ ಇಲ್ಲಿಯವರೆಗೂ ಜಮೀನು ಮಂಜೂರಾತಿ ಮಾತ್ರ ಆಗಿಲ್ಲ. ಅಷ್ಟೇ ಅಲ್ಲದೆ, ಮಾಜಿ ಸೈನಿಕನ ಕುಟುಂಬಕ್ಕೆ ಸೇರಬೇಕಿದ್ದ ಈ ಜಮೀನು ಸದ್ಯ ಒತ್ತುವರಿದಾರರ ಪಾಲಾಗಿದೆ ಎಂಬ ಗಂಭೀರ ಆರೋಪವೂ ಕೇಳಿಬಂದಿದೆ.

ಜಿಲ್ಲಾಧಿಕಾರಿಗಳು ಹಾಗೂ ತಹಶೀಲ್ದಾರ್ ಅವರಿಗೆ ಪದೇಪದೆ ಮನವಿ ಸಲ್ಲಿಸಿದರೂ ಯಾವುದೇ ಸ್ಪಂದನೆ ಸಿಕ್ಕಿಲ್ಲ. ಸರ್ಕಾರ ಮತ್ತು ಸಂಬಂಧಪಟ್ಟ ಅಧಿಕಾರಿಗಳು ತಕ್ಷಣ ಮಧ್ಯಪ್ರವೇಶಿಸಿ ಜಮೀನು ಮಂಜೂರು ಮಾಡದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳುವುದು ಅನಿವಾರ್ಯ ಎಂದು ಸ್ವರೂಪರಾಣಿ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶಿವಾನಂದ ರೆಡ್ಡಿ, ರಜಿನಿ, ಶೋಭಾ, ಭಾಷಾ, ಸುಧಾ, ಶಿಲ್ಪ ಕೃಷ್ಣಪ್ಪ, ವೇಮಣ್ಣ, ನರಸಿಂಹ ಸೇರಿದಂತೆ ಹಲವರು ಉಪಸ್ಥಿತರಿದ್ದು ಸಂತ್ರಸ್ತ ಕುಟುಂಬಕ್ಕೆ ಬೆಂಬಲ ಸೂಚಿಸಿದರು.

# "ಕಾರ್ಪೊರೇಟ್ ಸ್ವಯಂ ಸೇವೆಯಲ್ಲಿ ಸಿಎಸ್‌ಆರ್ – ವಾಸ್ತವಿಕತೆಗಳು

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು, : ಯೂತ್ ಫಾರ್ ಸೇವಾ ಸಂಸ್ಥೆಯು ಬೆಂಗಳೂರಿನಲ್ಲಿ ಕಾರ್ಪೊರೇಟ್ ಸ್ವಯಂ ಸೇವಕ ಸಮಾವೇಶ (CVC) 2026 ಅನ್ನು ಆಯೋಜಿಸಿತು, ಇದು ಉದ್ಯೋಗಿ ಸ್ವಯಂ ಸೇವೆಯು ಅರ್ಥಪೂರ್ಣ ಮತ್ತು ಸುಸ್ಥಿರ ಸಾಮಾಜಿಕ ಪರಿಣಾಮವನ್ನು ಹೇಗೆ ಸೃಷ್ಟಿಸುತ್ತದೆ ಎಂಬುದನ್ನು ಅನ್ವೇಷಿಸಲು ಕಾರ್ಪೊರೇಟ್, ಅಖಿಖ ಮತ್ತು ಸಾಮಾಜಿಕ ವಲಯಗಳ ನಾಯಕರು ಮತ್ತು ವೃತ್ತಿಪರರನ್ನು ಒಟ್ಟುಗೂಡಿಸಿತು.

ಈ ಸಮಾವೇಶದಲ್ಲಿ ಆರ್ಟ್ ಆಫ್ ಲಿವಿಂಗ್‌ನ ಸಂಸ್ಥಾಪಕ ಗುರುದೇವ್ ಶ್ರೀ ಶ್ರೀ ರವಿಶಂಕರ್ ಅವರು ಪ್ರಮುಖ ಭಾಷಣ ಮಾಡಿದರು, ಅವರು ಸ್ವಯಂಸೇವೆ ಮತ್ತು ಸೇವೆಯ ಆಳವಾದ ಮನೋಭಾವದ ಬಗ್ಗೆ ಮಾತನಾಡಿದರು. ಸ್ವಯಂಸೇವೆಯು ಕೇವಲ ಸೇವೆಯ ಕ್ರಿಯೆಯಲ್ಲ, ಆದರೆ ಇತರರಲ್ಲಿ ಘನತೆ ಮತ್ತು ದೈವತ್ವವನ್ನು ಗುರುತಿಸುವ ಒಂದು ಮಾರ್ಗವಾಗಿದೆ ಎಂದು ಅವರು ಒತ್ತಿ ಹೇಳಿದರು. ಅರ್ಥಪೂರ್ಣ ಸ್ವಯಂಸೇವೆಯ ಪ್ರಮುಖ ಅಡಿಪಾಯಗಳಾಗಿ ಕರುಣೆ, ಸಂತೋಷ ಮತ್ತು ನಿಸ್ವಾರ್ಥತೆಯ ಮನೋಭಾವವನ್ನು ಅವರು ಎತ್ತಿ ತೋರಿಸಿದರು, ಇದು ವಸುಧೈವ ಕುಟುಂಬಕಂ – ಜಗತ್ತು ಒಂದು ಕುಟುಂಬ ಎಂಬ ಅಕಾಲಿಕ ತತ್ವವನ್ನು ಪ್ರತಿಬಿಂಬಿಸುತ್ತದೆ. "ಕಾರ್ಪೊರೇಟ್ ಸ್ವಯಂ ಸೇವೆಯಲ್ಲಿ ಸಿಎಸ್‌ಆರ್ – ವಾಸ್ತವಿಕತೆಗಳು ಮತ್ತು ಪರಿಣಾಮಕ್ಕೆ ಉದ್ದೇಶವನ್ನು ಜೋಡಿಸುವುದು"




ಎಂಬ ವಿಷಯದ ಕುರಿತು ಪ್ರಮುಖ ಪ್ಯಾನಲ್ ಚರ್ಚೆಯಲ್ಲಿ ಡಾ. ಮೀನು ಬಂಭಾನಿ, ಆದಿತ್ಯ ಸಾಲಿಯನ್, ಪರಮೇಶ್ವರನ್ ಬಾಲಕೃಷ್ಣನ್ ಮತ್ತು ರವಿಶಂಕರ್ ಆರ್.ಎಚ್ ಭಾಗವಹಿಸಿದ್ದರು. ಸಂಸ್ಥೆಗಳು ಸಿಎಸ್‌ಆರ್ ಉದ್ದೇಶವನ್ನು ನಿಜವಾದ ಸಮುದಾಯದ ಅಗತ್ಯಗಳಿಗೆ ಸ್ಪಂದಿಸುವ ಮತ್ತು ಅಳೆಯಬಹುದಾದ ಫಲಿತಾಂಶಗಳನ್ನು ನೀಡುವ ಪರಿಣಾಮಕಾರಿ ಸ್ವಯಂಸೇವೆಯ ಕಾರ್ಯಕ್ರಮಗಳಾಗಿ ಹೇಗೆ ಪರಿವರ್ತಿಸಬಹುದು ಎಂಬುದನ್ನು ಸಮಿತಿಯು ಅನ್ವೇಷಿಸಿತು.

ಚರ್ಚೆಗಳು ಕಾರ್ಯತಂತ್ರದ ಪಾಲುದಾರಿಕೆಗಳು, ನಿರಂತರ ಉದ್ಯೋಗಿ ತೊಡಗಿಸಿಕೊಳ್ಳುವಿಕೆ ಮತ್ತು ಅಳೆಯಬಹುದಾದ ಪ್ರಭಾವದ ಪ್ರಾಮುಖ್ಯತೆಯನ್ನು ಎತ್ತಿ ತೋರಿಸಿದವು, ಆದರೆ ಸ್ವಯಂಸೇವೆಯ ಬಲವಾದ ಸಂಸ್ಕೃತಿಯನ್ನು ನಿರ್ಮಿಸುವುದು ತಾಳ್ಮೆ ಮತ್ತು ಸ್ಥಿರತೆಯ ಅಗತ್ಯವಿರುವ ದೀರ್ಘಾವಧಿಯ ಪ್ರಯಾಣವಾಗಿದೆ ಎಂದು ಒತ್ತಿಹೇಳಿತು.

ಉದ್ಯೋಗಿ ಯೋಗಕ್ಷೇಮ, ಸಮುದಾಯ ಅಭಿವೃದ್ಧಿ ಮತ್ತು ಸಾಮಾಜಿಕ-ಆರ್ಥಿಕ ಪ್ರಗತಿಯನ್ನು ಉತ್ತೇಜಿಸುವಲ್ಲಿ ಸ್ವಯಂಸೇವೆಯ ಪಾತ್ರದ ಬಗ್ಗೆಯೂ ಸಮಾವೇಶವು ಪ್ರತಿಬಿಂಬಿಸಿತು. ಕಾರ್ಪೊರೇಟ್‌ಗಳು, ಸ್ವಯಂಸೇವಕರು ಮತ್ತು ಸಾಮಾಜಿಕ ಸಂಸ್ಥೆಗಳ ನಡುವಿನ ಬಲವಾದ ಸಹಯೋಗದೊಂದಿಗೆ, ಭಾಗವಹಿಸುವಿಕೆಯನ್ನು ಮೀರಿ ಚಲಿಸಲು ಮತ್ತು ಶಾಶ್ವತ ಸಮುದಾಯ ಪರಿವರ್ತನೆಗೆ ಪ್ರಬಲ ಶಕ್ತಿಯಾಗಲು ಕಾರ್ಪೊರೇಟ್ ಸ್ವಯಂಸೇವೆಯ ಸಾಮರ್ಥ್ಯವನ್ನು ಈ ಕಾರ್ಯಕ್ರಮವು ಒತ್ತಿಹೇಳಿತು. ಸಿವಿಸಿ 2026 ಸರಳ ಸಂದೇಶವನ್ನು ಬಲಪಡಿಸಿತು: ಕಾರ್ಪೊರೇಟ್ ಉದ್ದೇಶವು ಸೇವೆಯ ಮನೋಭಾವವನ್ನು ಪೂರೈಸಿದಾಗ, ಸ್ವಯಂಸೇವೆಯು ಅರ್ಥಪೂರ್ಣ ಮತ್ತು ಶಾಶ್ವತ ಪರಿಣಾಮಕ್ಕೆ ಅನುವಾದಿಸಬಹುದು.

# 45 ದಿನಗಳ ಚಪ್ಪಲ್ ತಯಾರಿಕಾ ತರಬೇತಿ

ಸೂರ್ಯಪ್ರಗತಿನ್ಯೂಸ್.ಕಾಂ

ಯಲ್ಲಾಪುರ: ರೋಟರಿ ಶಿರಾಗೆಟ್, ಯಲ್ಲಾಪುರ ಹಾಗೂ ಸ್ನೇಹ ಸಮೃದ್ಧಿ ಫೌಂಡೇಶನ್ ಮತ್ತು ಕದಂಬ ಎಜುಕೇಶನ್ ಟ್ರಸ್ಟ್ ಇವರ ಸಹಯೋಗದಲ್ಲಿ 45 ದಿನಗಳ ಚಪ್ಪಲ್ ತಯಾರಿಕಾ ತರಬೇತಿ ಕಾರ್ಯಕ್ರಮದ ಉದ್ಘಾಟನಾ ಸಮಾರಂಭವನ್ನು ಆಯೋಜಿಸಲಾಯಿತು.




ಕಾರ್ಯಕ್ರಮದಲ್ಲಿ ಮಿನಿಸ್ಟ್ರಿ ಆಫ್ ಟೆಕ್ಸೈಲ್ಸ್ ವತಿಯಿಂದ ಕುಮಾರಿ ರಾಕಿ ಅವರು ಭಾಗವಹಿಸಿದ್ದರು. ಇದೇ ಸಂದರ್ಭದಲ್ಲಿ ಗ್ರಾಮ ಪಂಚಾಯಿತಿ ಸದಸ್ಯರಾದ ಜಾನಕಮ್ಮ ವೀರೇಶ್ ಹಾಗೂ ಗೋವರ್ಧನ್ ಅವರು ಉಪಸ್ಥಿತರಿದ್ದು, ತರಬೇತಿ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

ಸ್ನೇಹ ಸಮೃದ್ಧಿ ಫೌಂಡೇಶನ್, ರಮೇಶ್ ಕದಂಬ ಎಜುಕೇಶನ್ ಟ್ರಸ್ಟ್,ಹರೀಶ್ ಹಾಗೂ ಬ್ಯಾಂಕ್ ಆಫ್ ಬರೋಡಾ, ತುಮಕೂರು ವತಿಯಿಂದ ಪ್ರತಿನಿಧಿಗಳು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

45 ದಿನಗಳ ಈ ತರಬೇತಿಯ ಮೂಲಕ ಆಸಕ್ತರಿಗೆ ಚಪ್ಪಲ್ ತಯಾರಿಕೆಯ ಕೌಶಲ್ಯವನ್ನು ನೀಡುವುದರ ಜೊತೆಗೆ ಸ್ವಯಂ ಉದ್ಯೋಗ ಹಾಗೂ ಸ್ವಾವಲಂಬನೆಗೆ ಉತ್ತೇಜನ ನೀಡುವುದು ಕಾರ್ಯಕ್ರಮದ ಮುಖ್ಯ ಉದ್ದೇಶವಾಗಿದೆ. ತರಬೇತಿ ಪಡೆದವರು ಕೌಶಲ್ಯವನ್ನು ಬಳಸಿಕೊಂಡು ತಮ್ಮದೇ ತಆದ ಉದ್ಯೋಗ ಆರಂಭಿಸಿ ಆರ್ಥಿಕವಾಗಿ ಸ್ವಾವಲಂಬಿಗಳಾಗಲು ಸಾಧ್ಯವಾಗಲಿದೆ ಎಂದು ಆಯೋಜಕರು ತಿಳಿಸಿದರು.

ಕಾರ್ಯಕ್ರಮದಲ್ಲಿ ತರಬೇತಿ ಪಡೆಯುವ ಅಭ್ಯರ್ಥಿಗಳು, ಸಂಸ್ಥೆಗಳ ಪದಾಧಿಕಾರಿಗಳು, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಸ್ಥಳೀಯರು ಭಾಗವಹಿಸಿದ್ದರು. ಕಾರ್ಯಕ್ರಮವು ಯಶಸ್ವಿಯಾಗಿ ನೆರವೇರಿತು.

## ಅ. 11 ರಿಂದ 21ರ ವರೆಗೆ ನವರಾತ್ರಿ ವೈಭವ ಪೂಜಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ

ತುಮಕೂರು– ಕೊರಟಗೆರೆ ತಾಲ್ಲೂಕಿನ ತಂಗನಹಳ್ಳಿ ಸುಕ್ಷೇತ್ರದ ಮೋಕ್ಷದಾಯಿನಿ ಶ್ರೀ ಕಾಶಿ ಅನ್ನಪೂರ್ಣೇಶ್ವರಿ ಮಹಾಸಂಸ್ಥಾನ ಮಠದಲ್ಲಿ ಅ.11 ರಿಂದ 21ರ ವರೆಗೆ ನವರಾತ್ರಿ ವೈಭವ ಪೂಜಾ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ನವರಾತ್ರಿ ವೈಭವದ ಅಂಗವಾಗಿ ಶ್ರೀಮಠದಲ್ಲಿ ಅ. 11 ರಿಂದ 21ರ ವರೆಗೆ ಪ್ರತಿನಿತ್ಯ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನಡೆಯಲಿವೆ ಎಂದು ತಂಗನಹಳ್ಳಿ ಸುಕ್ಷೇತ್ರ ಮಠಾಧ್ಯಕ್ಷರಾದ ಶ್ರೀ ಬಸವಮಹಾಲಿಂಗ ಸ್ವಾಮೀಜಿ ತಿಳಿಸಿದ್ದಾರೆ.

ಅ. 19 ರಂದು ಬೆಳಿಗ್ಗೆ 9 ರಿಂದ 11.30ರ ವರೆಗೆ ದುರ್ಗಾ ಹೋಮ ಏರ್ಪಡಿಸಲಾಗಿದೆ. ನವರಾತ್ರಿ ವೈಭವ ಕಾರ್ಯಕ್ರಮದಲ್ಲಿ ಭಕ್ತಾದಿಗಳು ಹಾಗೂ ಗ್ರಾಮಸ್ಥರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಮೋಕ್ಷದಾಯಿನಿ ಶ್ರೀ ಕಾಶಿ ಅನ್ನಪೂರ್ಣೇಶ್ವರಿ ತಾಯಿಯ ಕೃಪೆಗೆ ಪಾತ್ರರಾಗಬೇಕು ಎಂದು ಶ್ರೀಗಳು ಮನವಿ ಮಾಡಿದ್ದಾರೆ.

# ಮನೆ ಮುಂದೆ ಚರಂಡಿ ನದಿ...!

## ಇದು ಅಭಿವೃದ್ಧಿಯೋ? ಅವ್ಯವಹಾರವೋ?

ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ (ಅರಸೀಕೆರೆ ಗ್ರಾಮ ದಲಿತ ಕಾಲೋನಿಯಲ್ಲಿ ಮೂಲಭೂತ ಸೌಕರ್ಯಗಳ ಕೊರತೆಯಿಂದ ಜನರು ಬೇಸತ್ತಿದ್ದು, ನೂತನವಾಗಿ ನಿರ್ಮಿಸಿರುವ ಸಿಸಿ ರಸ್ತೆ ಮತ್ತು ಚರಂಡಿ ಕಾಮಗಾರಿ ಅತ್ಯಂತ ಕಳಪೆಯಾಗಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.



ಕಾಲೋನಿಯಲ್ಲಿ ಚರಂಡಿ ವ್ಯವಸ್ಥೆ ಸರಿಯಿಲ್ಲದೆ ಮಳೆ ನೀರು ಹಾಗೂ ಕೊಳಚೆ ನೀರು ನೇರವಾಗಿ ದಲಿತ ಕುಟುಂಬಗಳ ಮನೆಗಳ ಮುಂದೆ ಮತ್ತು ಮನೆಗಳ ಒಳಗೆ ನುಗ್ಗುತ್ತಿದೆ. ಚರಂಡಿ ನೀರು ಹರಿಯಲು ಸರಿಯಾದ ಇಳಿಜಾರು ನೀಡದೆ ಕಾಮಗಾರಿ ಮಾಡಿರುವುದರಿಂದ ನೀರು ನಿಂತು ದುರ್ವಾಸನೆ ಬೀರುತ್ತಿದೆ. ಸೊಳ್ಳೆಗಳ ಕಾಟ ಹೆಚ್ಚಾಗಿ ಮಕ್ಕಳು, ವೃದ್ಧರು ಸಾಂಕ್ರಾಮಿಕ ರೋಗದ ಭೀತಿಯಲ್ಲಿ ಬದುಕುವಂತಾಗಿದೆ.

ಇನ್ನೊಂದು ಕಡೆ ಲಕ್ಷಾಂತರ ರೂಪಾಯಿ ಅನುದಾನದಲ್ಲಿ ನಿರ್ಮಿಸಿರುವ ಸಿಸಿ ರಸ್ತೆ ಕೆಲವೇ ದಿನಗಳಲ್ಲಿ ಕಿತ್ತು ಬರುತ್ತಿದೆ. ಕಡಿಮೆ ಸಿಮೆಂಟ್, ಹೆಚ್ಚು ಮರಳು ಬಳಸಿ ಕಳಪೆ ಕಾಮಗಾರಿ ಮಾಡಲಾಗಿದೆ. ಎಂದು ಕಾಲೋನಿ ನಿವಾಸಿಗಳು ಆರೋಪಿಸಿದ್ದಾರೆ.

**ಗ್ರಾಮಸ್ಥರ ಆಗ್ರಹ:**

ಈ ಕುರಿತು ಗ್ರಾಮ ಪಂಚಾಯತಿ ಅಧಿಕಾರಿಗಳು ಹಾಗೂ ಗುತ್ತಿಗೆದಾರರಿಗೆ ಹಲವು ಬಾರಿ ಮನವಿ ಮಾಡಿದರೂ ಯಾರೂ ಸ್ಥಳಕ್ಕೆ ಭೇಟಿ ನೀಡಿಲ್ಲ. ಕೂಡಲೇ ತಾಲೂಕು ಆಡಳಿತ ಹಾಗೂ ಜಿಲ್ಲಾ ಪಂಚಾಯತ್ ಇಂಜಿನಿಯರ್ ಗಳು ಸ್ಥಳಕ್ಕೆ ಭೇಟಿ ನೀಡಿ ಕಳಪೆ ಕಾಮಗಾರಿಯ ತನಿಖೆ ನಡೆಸಿ, ಚರಂಡಿ ನೀರು ಕಾಲೋನಿಗೆ ನುಗ್ಗದಂತೆ ಶಾಶ್ವತ ಪರಿಹಾರ ಕಲ್ಪಿಸಬೇಕು ಎಂದು ದಲಿತ ಕಾಲೋನಿಯ ನಿವಾಸಿಗಳು ಒತ್ತಾಯಿಸಿದ್ದಾರೆ.

ಅಭಿವೃದ್ಧಿ ಹೆಸರಿನಲ್ಲಿ ಹಣ ನುಂಗುವ ಕಳಪೆ ಕಾಮಗಾರಿ ನಿಲ್ಲಿಸಿ, ದಲಿತ ಕಾಲೋನಿಗೆ ನ್ಯಾಯ ಒದಗಿಸದಿದ್ದರೆ ಪಾವಗಡ ತಾಲೂಕು ಕಚೇರಿ ಮುಂದೆ ದಲಿತ ಸಂಘರ್ಷ ಸಮಿತಿ ಸಂಘಟನಾ ಸಂಚಾಲಕರಾದ ವೆಂಕಟರಮಣ ಮತ್ತು ಕೆಪಿ ಲಿಂಗಣ್ಣ ಪ್ರತಿಭಟನೆ ನಡೆಸುವುದಾಗಿ ಎಚ್ಚರಿಕೆ ನೀಡಿದ್ದಾರೆ.

# ಪ್ರತಿಷ್ಠಿತ ಸಾಂಸ್ಥಿಕ ನಾಯಕತ್ವ ಶ್ರೇಷ್ಠತೆ ಪ್ರಶಸ್ತಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಅಕ್ಷಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ (ಎಐಟಿ) ಪ್ರಾಂಶುಪಾಲರಾದ ಡಾ. ಯತೀಶಾ ಎಲ್ ಅವರಿಗೆ ಕೊಯಮತ್ತೂರಿನಲ್ಲಿ ನಡೆದ ಎಇಎ ವಿಂಗ್ಸ್ ಆಫ್ ಆಪರ್ಚುನಿಟಿ ಸಮಾವೇಶದಲ್ಲಿ ಪ್ರತಿಷ್ಠಿತ "ಸಾಂಸ್ಥಿಕ ನಾಯಕತ್ವ ಶ್ರೇಷ್ಠತೆ ಪ್ರಶಸ್ತಿ" ಪ್ರದಾನ ಮಾಡಲಾಯಿತು.

ನೆಹರು ಗ್ರೂಪ್ ಆಫ್ ಇನ್ಸಿಟ್ಯೂಷನ್ಸ್ ಹಾಗೂ ಪಿ.ಕೆ. ದಾಸ್ ವಿಶ್ವವಿದ್ಯಾಲಯ ವತಿಯಿಂದ ನೀಡಲಾದ ಈ ಪ್ರಶಸ್ತಿಯನ್ನು ಪದ್ಮಭೂಷಣ ಶ್ರೀ ಎಸ್. ನಂಬಿ ನಾರಾಯಣನ್ ಅವರ ಗೌರವಾನ್ವಿತ ಸಮ್ಮುಖದಲ್ಲಿ ಡಾ. ಯತೀಶಾ ಎಲ್ ಅವರು ಸ್ವೀಕರಿಸಿದರು.

ಶೈಕ್ಷಣಿಕ ಗುಣಮಟ್ಟದ ಅಭಿವೃದ್ಧಿ, ವಿದ್ಯಾರ್ಥಿಗಳ ಸಮಗ್ರ ಪ್ರಗತಿ ಹಾಗೂ ಸಂಸ್ಥೆಯ ಶೈಕ್ಷಣಿಕ ಮತ್ತು ಆಡಳಿತಾತ್ಮಕ ಬೆಳವಣಿಗೆಗೆ ಅವರು ನೀಡುತ್ತಿರುವ ಕೊಡುಗೆ ಹಾಗೂ ಸಮರ್ಪಿತ ನಾಯಕತ್ವವನ್ನು ಗುರುತಿಸಿ ಈ ಗೌರವವನ್ನು ನೀಡಲಾಗಿದೆ.

ಡಾ. ಯತೀಶಾ ಎಲ್ ಅವರಿಗೆ ದೊರೆತ ಈ ಪ್ರತಿಷ್ಠಿತ ಪ್ರಶಸ್ತಿಯು ಅಕ್ಷಯ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳಲ್ಲಿ ಸಂತಸ ಮತ್ತು ಹೆಮ್ಮೆಯನ್ನು ಮೂಡಿಸಿದೆ. ಅವರ ನಾಯಕತ್ವದಲ್ಲಿ ಸಂಸ್ಥೆಯು ಶೈಕ್ಷಣಿಕ ಶ್ರೇಷ್ಠತೆಯತ್ತ ಮತ್ತಷ್ಟು ಮುನ್ನಡೆಯಲಿ ಎಂದು ಎಐಟಿ ಕುಟುಂಬವು ಹಾರೈಸಿದೆ.



**ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ**

# ದಸರಾ ಮಹೋತ್ಸವ :

## ಕರಿಗಿರಿ ಕ್ಷೇತ್ರದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ

ತುಮಕೂರು: ದಸರಾ ಮಹೋತ್ಸವದ ಅಂಗವಾಗಿ ಜಿಲ್ಲೆಯ ಕರಿಗಿರಿ ಕ್ಷೇತ್ರ ದೇವರಾಯನದುರ್ಗದ ಶ್ರೀ ಲಕ್ಷ್ಮೀನರಸಿಂಹಸ್ವಾಮಿ ದೇವಸ್ಥಾನದಲ್ಲಿ ಅಕ್ಟೋಬರ್ 11 ರಿಂದ 21ರವರೆಗೆ ವಿಶೇಷ ಪೂಜಾ ಕಾರ್ಯಕ್ರಮಗಳು ಜರುಗಲಿವೆ.

ದಸರಾ ಪ್ರಯುಕ್ತ ಶ್ರೀ ಲಕ್ಷ್ಮೀನರಸಿಂಹಸ್ವಾಮಿಗೆ ಅಕ್ಟೋಬರ್ 11ರಂದು ಅರಿಶಿನ ಅಲಂಕಾರ, 12ರಂದು ಮುತ್ತಿನ ಅಲಂಕಾರ, 13ರಂದು ಕುಂಕುಮ ಅಲಂಕಾರ, 14ರಂದು ಚಿನ್ನದಂತಿರುವ ಆಭರಣಗಳಿಂದ ಅಲಂಕಾರ, 15ರಂದು ವಿಶೇಷ ಹೂವಿನ ಅಲಂಕಾರ, 16ರಂದು ಬೆಣ್ಣೆ ಅಲಂಕಾರ(ಸರಸ್ವತಿ ಪೂಜೆ), 17ರಂದು ಬಂಗಾರದಂತಿರುವ ಕವಚ ಅಲಂಕಾರ, 18ರಂದು ದುರ್ಗಾಷ್ಟಮಿ ಗಂಧದ ಅಲಂಕಾರ, 19ರಂದು ಚಿನ್ನದಂತಿರುವ ಕವಚ ಧಾರಣೆ, 20ರಂದು ಬೆಳ್ಳಿ ಕವಚ ಅಲಂಕಾರ ಹಾಗೂ 21ರಂದು ವಜ್ರದಂತಿರುವ ಆಭರಣಗಳಿಂದ ಅಲಂಕಾರ ಮಾಡಲಾಗುವುದು. ದಸರಾ, ಮಹಾನವಮಿ ಅಂಗವಾಗಿ ಶ್ರೀ ಸ್ವಾಮಿಗೆ ಬೆಳಗ್ಗೆ 8.30 ಗಂಟೆಗೆ ಅಭಿಷೇಕ ಪ್ರಾರಂಭಿಸಲಾಗುವುದು. ಪ್ರತಿ ದಿನ 10.30 ಗಂಟೆಗೆ ಮಹಾ ಮಂಗಳಾರತಿ, ಉತ್ಸವಗಳು ಮತ್ತು ಪ್ರಸಾದ ವಿನಿಯೋಗ ಇರುತ್ತದೆ.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕಾಗಿ ದೇವಸ್ಥಾನದ ಕಾರ್ಯನಿರ್ವಾಹಕ ಅಧಿಕಾರಿ ಎಸ್.ಟಿ. ಸುನೀಲ್ ಕುಮಾರ್ ಮನವಿ ಮಾಡಿದ್ದಾರೆ.

## ತುಮಕೂರು ಜಿಲ್ಲಾ ಮಕ್ಕಳ ದಸರಾಗೆ ವಿಶೇಷ ಅತಿಥಿಗಳಾಗಿ ಯಶವಂತ್, ಮಹಾಲಕ್ಷ್ಮೀಗೆ ಆಹ್ವಾನ



ಚಿಕ್ಕನಾಯಕನಹಳ್ಳಿ:– ತುಮಕೂರಿನಲ್ಲಿ ಜಿಲ್ಲಾಡಳಿತ ದಿನಾಂಕ 15/10/2026ರಂದು ನಡೆಸಲಿರುವ ಮಕ್ಕಳ ದಸರಾ ಕಾರ್ಯಕ್ರಮಕ್ಕೆ ವಿಶೇಷ ಅತಿಥಿಗಳನ್ನಾಗಿ ಜಿಲ್ಲೆಯಲ್ಲಿ ಎಸ್ಎಸ್ಎಲ್‌ಸಿ ಪರೀಕ್ಷೆಯಲ್ಲಿ ಅತಿಹೆಚ್ಚು ಅಂಕ ಪಡೆದಿರುವ ಮೇಲನಹಳ್ಳಿ ಮುರಾರ್ಜಿ ವಸತಿಶಾಲೆಯ ಯಶವಂತ್ ಕೆ ಹಾಗೂ ಕೆಂಕೆರೆಯ ಕೆಪಿಎಸ್ ಶಾಲೆಯ ಮಹಾಲಕ್ಷ್ಮೀ ಕೆ ಇವರನ್ನು ಆಹ್ವಾನಿಸಲಾಗಿದೆ. ಇವರನ್ನು ಶಾಸಕ ಸಿ.ಬಿ.ಸುರೇಶ್‌ಬಾಬು ಸೇರಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿ ಬಿಇಒ ಕಾಂತರಾಜು ಶಾಲೆಯ ಪ್ರಾಂಶುಪಾಲರು, ಶಿಕ್ಷಕರುಗಳು ಅಭಿನಂದಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKA NAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.